Mr. SPEAKER.—The question is :

"That a sum not exceeding Rs. 1,60,64,400 be granted to the Government to defray the charges which will come in course of payment during the year ending 31st day of March 1955, in respect of 'Receipts from Electricity Schemes—Working Expenses'."

The motion was adopted.

DEMAND No. 39—ROAD TRANSPORT SCHEMES

XLVI.-A. RECEIPTS FROM ROAD TRANSPORT SCHEMES—WORKING EXPENSES.

Mr. SPEAKER.—Motion moved :

"That a sum not exceeding Rs. 47,50,000 be granted to the Government to defray the charges which will come in course of payment during the year ending 31st day of March 1955, in respect of 'Receipts from Road Transport Schemes—Working Expenses'."

Sri M. RAJASEKHARA MURTHY (Yelandur).—I have got up to give compliments to the Road Transport Minister regarding the running of the department. There is a sense of security in the minds of the passengers who travel . . . .

Mr. SPEAKER.—Incidentally if you desire you may refer to Demand No. 43 also though it is not moved now, because I have not allotted any time for that demand. Only one member can speak. That is all.

Sri M. RAJASEKHARA MURTHY.—At the outset may I point out that there is a sense of security in the mind of the passenger who travels in Government buses, because even if the passenger arrives at the bus stand late by forty-five minutes, he is quite sure that he can catch the bus ! Because the bus which is scheduled to leave Bangalore at 12 o'clock will leave at 1 P.M. Soon after the passenger gets into the bus, he will enjoy undisturbed journey, because no police officer will go and check the bus on account of instructions given by the Hon'ble Home Minister (*Laughter*). The drivers and conductors are very liberal to the passengers who are standing by the roadside and the conductors will take in all passengers and issue tickets liberally. A bus which is capable of accommodating only 30, by the generosity of conductors will be made to accommodate nearly 50 passengers. Further, passengers need not spend anything to carry the luggage to their houses, because by the time a passenger reaches his destination, the luggage will have been carried away by others. So to some extent the cost that he is to incur will be saved.

After they travel over a certain distance, the passengers will be made to enjoy or will be forced to enjoy certain rest because the bus will automatically stop on the road. Nobody knows where the defect lies ! The passengers must wait till a relief bus arrives. Thus a ticket holder in a Government bus enjoys the benefit of travelling in two buses.

Further, the passenger in the bus will enjoy very good music. This is a kind of noise produced by the jolting of the bus bodies and other sounds produced by differential, shutters, etc.

Mr. SPEAKER.—Does the Hon'ble Member wish to pass all these remarks when new buses are going to be purchased ?

Sri M. RAJASEKHARA MURTHY.—Again during the rainy season in some of the old buses, passengers will have very nice bath, free of cost since the roof and the shutters will have been damaged. Since buses are parked in open yard the Government need not spend anything for the cleaning of the buses. No cleaners need be employed and to that extent it is a savings to the department.

Some of the items of expenditure are not included in the expenditure column in their enthusiasm to show profit to the department. For example, they have not provided anything for insurance premium. Premium will be about Rs. 350 per bus under the comprehensive insurance scheme. That comes to about Rs. 45,000 for 150

(SRI M. RAJASEKHARA MURTHY.)

buses. The brake inspection fees comes to Rs. 3,000. Some other charges like permit fee, etc., come to 1,200. Roughly the total will be Rs. 50,000. This expenditure is not shown in the expenditure column.

Again they have not adequately provided towards depreciation. The total capital outlay is about 48 lakhs. The life of the buses is only four years. 25 per cent of the amount must be set apart towards depreciation charges. That comes to about Rs. 10 lakhs and the amount provided in the budget towards depreciation is only Rs. 7,50,000.

I learnt complaints have been received by the transport authorities about high luggage charges levied. I think it is better if these charges are brought down. With these words I close my speech.

(*Some members rose.*)

Mr. SPEAKER.—There is no time for others to speak.

***Sri H. SIDDAVEERAPPA** (Minister for Home and Industries).—My friend Sri Rajasekhara Murthy has given very great compliments right from the beginning. Probably, the description of the defects that he observed suits well for his own buses rather than the Government buses. Further, my friend has referred to one or two very important points which I cannot allow to go unnoticed. With regard to the insurance scheme I may tell my friend that although the buses have not been insured, I have made provision for keeping an equivalent amount as Accident Fund in the Road Transport Department itself so that if there is any bus which is damaged on account of some accident the money out of that fund may be utilised. I am told that this is not a novel scheme. It is prevalent in the Bombay Road Transport system. I have adopted the same. I may also inform my Hon'ble friend to his satisfaction that this year, I think, the department has paid all kinds of taxes to the tune of Rs. 3,60,000, all taxes which my Hon'ble friend is also subject to. And along with that the department has also made adequate provision for 4 per cent interest.

Sri B. HUTCHE GOWDA (Turuvekere).—And they have incurred a loss of one lakh.

Sri H. SIDDAVEERAPPA.—This year? No. That is not the correct position. I have not got the file here with me; otherwise I would have given the figures. With regard to luggage, there is a demand from the public that the luggage charges are heavy. I have been thinking of reducing the charges so that the passengers may not be unduly inconvenienced. I may assure the Hon'ble House that the department has been taking all possible steps to see that better service is provided to the travelling public. It is not merely a question of earning money. That is purely secondary. Our main object should be to provide better facilities to the travelling public so that those who travel in these buses will bear ample testimony to the better service—in fact my learned friend has referred to establishing booking offices. That is engaging my attention already. As early as 1950 there is a Government order in the matter of establishing booking offices specially in important places where these buses cover a large area. I have already issued instructions that immediately, forthwith, some booking offices may be established in places like Nanjangud, Chitaldrug, Nelamangala and some other places. In Tumkur also, we have got a booking office there. With regard to that also I have already taken steps.

With regard to over-loading it has been brought to my notice so forcibly that I cannot allow it to go unnoticed. I have already issued instructions in the matter. My position was rather very difficult to begin with because there were few buses and where we had the monopoly I had to meet the demands of the public. Now that we are going to have 50 buses more which are ready to be put on the road, I have already assured the House and I repeat that assurance that in every place where there is congestion, as many buses as are necessary will be put. With regard to overloading, I have issued instructions that in no case there should

be overloading. I am telling this to my friend just to erase that impression from his mind. As a matter of fact there are any number of cases where the transport drivers and conductors have been hauled up by the Police if they have committed any mistake such as overloading. The law is no respector of persons.

Sri A. BHEEMAPPA NAIK (Molakalmuru).—In spite of his assurance, in long distances there is this overloading. Let him say categorically whether in short or long distances there shall be no overloading. It is no use merely giving an assurance here.

Sri H. SIDDAVEERAPPA.—I have felt the force of the argument raised by my friend. But I may assure him this much: that I am not in the habit of saying one thing here and another thing in some other place. Of course, sometimes overloading does happen. But then it happens this way, especially in the monopoly routes, where the husband, wife and two children happen to require accommodation. Shall I make any discrimination among them? Especially in a case like this, sometimes when there are only two last buses, it becomes almost impossible to make any discrimination. The passengers themselves will say: "it does not matter, somehow put in their luggage and take them in." So far as overloading is concerned, it is my responsibility also to see that it is reduced to the absolute minimum and eliminate it almost to nil as early as possible. And in that direction.....

Sri J. MOHAMED IMAM (Jagalur).—What is the minimum overload and the maximum overload?

Sri H. SIDDAVEERAPPA.—Even for a machine there is what is called tolerance limit. Up to that one can tolerate and I may assure you that that limit will never be overcome.

2 P.M.

With regard to long distance passengers, I have in view to provide for some more facilities. The Hon'ble Leader of the Opposition was making some useful suggestions. He was good enough to go round the offices of the Road Transport Department. My friend Sri M. Rajasekhara Murthy also was there. He was very much happy and his anxiety is that as far as possible, we must provide still better facilities. Useful suggestions as to how best we can improve the working of this Department have been given by the Hon'ble Leader of the Opposition, and I shall bear them in mind. In a way, his suggestions are entitled to great weight because he is the father of the Road Transport Department and he is very much interested in seeing that this Department works as successfully as possible.

With this assurance, I am sure the House will be pleased to pass this Demand.

Sri M. PALANIYAPPAN (Ulsoor).—Inspectors cause unnecessary delay in several routes, Sir.

Sri H. SIDDAVEERAPPA.—There is what is called a complaints book in each bus. If there is any complaint, you can record in that book.

Mr. SPEAKER.—The question is:

"That a sum not exceeding Rs. 47,50,000 be granted to the Government to defray the charges which will come in course of payment during the year ending 31st day of March 1955, in respect of 'Receipts from Road Transport Schemes—Working Expenses'."

The motion was adopted.

DEMAND No. 43—MISCELLANEOUS CAPITAL ACCOUNT.

82-B. CAPITAL OUTLAY ON ROAD TRANSPORT SCHEMES.

Mr. SPEAKER.—The question is:

"That a sum not exceeding Rs. 27,00,000 be granted to the Government to defray the charges which will come in course of payment during the year ending 31st day of March 1955, in respect of 'Capital Outlay on Road Transport Schemes'."

The motion was adopted.

DEMAND No. 40—IRRIGATION.

68. CONSTRUCTION OF IRRIGATION, NAVIGATION, EMBANKMENT AND DRAINAGE WORKS OUTSIDE THE REVENUE ACCOUNT.

Mr. SPEAKER.—Motion moved:

"That a sum not exceeding Rs. 3,33,96,000 be granted to the Government to defray the charges which will come in course of payment during the year ending 31st day of March 1955, in respect of 'Construction of Irrigation, Navigation, Embankment and Drainage Works outside the Revenue Account'."

Sri S. SRINIVASA IYENGAR (T.-Narsipur).—Sir, I oppose the Demand. Sir, in connection with the agreement between the Government of Mysore and the Government of Madras about the sharing of waters in the river Cauvery, that was entered into in the year 1924, we are permitted to develop irrigation to the extent of 1,10,000 acres apart from the irrigation under the K. R. S. Sir, from the date of entering into the agreement, we have already completed 30 years and we have only 20 years to go, when the 1924 agreement is liable to be revised. While the Government of Madras all along have developed their irrigation to a large extent the l test instance being Bhavani and Amaravathi, we on our side have not shown an equal amount of activity; and they get a prescriptive right under these development schemes and at the time of revision of the 1924 agreement Madras will have a claim on us. Very unfortunately the Mysore Government have not attempted to avail themselves of the opportunity of developing additional 1,10,000 acres and even under K. R. S. we are permitted to develop to the extent of 1/3 of the extent under channels in addition to the acreage agreed upon. Sir, in the light of that, I urge upon the Government of Mysore to see that they immediately carry on a survey to find out whether they can construct more dams in order to impound more water to develop 1,10,000 acres permitted for fresh irrigation.

Further, Sir, even under the existing channels, water supply has not been made. To give an instance, the Thuruganoor Branch Extension channel was completed nearly ten years back and water has not been let in. Government is a double loser. Government has not only lost construction and water rate, but at the same time, they have to pay interest on capital that has been spent on this extension while they are not even getting interest on this capital outlay. I would urge the Government to see that immediately water is let in through this channel.

The third point is, in T.-Narsipur Taluk in the south-west portion, there are a number of valleys by means of which rain water is collected and carried on into the river. Most of this water is not made use of in the Mysore State, because after it flows into the Cauvery, Cauvery and Kapini will join together and flow down to Madras State. I would urge upon the Government of Mysore to take up a scheme and see how much of this water they can retain for use within the territories of Mysore State. There are so many places where they can develop irrigation projects and bring about hundreds and thousands of acres under irrigation. No development has been made in this regard and I urge upon the Government to see that they take up most of these schemes to prevent water flowing out of the State without being used.

Sir, in Thungabhadra Project, we have a low level canal that runs for a distance of 14 miles in our territory and we are bound to supply water to the low level canal. This low level canal is not of much use to Mysore State. Even if there is a large extent of area that may be brought under paddy cultivation within this area, water will have to be delivered intact to other areas without being used. I believe that the Government of Mysore have a case to represent to the Government of India and see that some quantities of water may be taken up for irrigation within the 14th mile. Under the low level canal even

though 2 lakhs acres can be brought under cultivation, only 90,000 acres are situated within the territories of Mysore; and even out of this 90,000 acres about 20,000 acres are wet lands. Therefore the area that is left over for development is only 70,000 acres. The rivers Bhima, Krishna, and Thungabhadra take their birth in Karnataka. Krishna river after its water supply from the rivers Thungabhadra and Bhima enters Andhra and they get all the benefit. Karnataka is not given its due share in the sharing of waters of Krishna. The Government of Andhra and Government of Madras have greater advantages and Mysore has been made to share liabilities without getting its claim recognised.

With regard to hydro-electric power, we can develop the Shimsha Project by spending half or a quarter of the amount proposed to be spent at Thungabhadra, and still have the same result.

Sir, as regards the high level canal, I must say that the Government of Mysore should urge for the taking of the high level canal as the low level canal benefits the people of Mysore very little. It is the high level canal that will be of much use to Mysore State and therefore I urge upon the Government to represent to the Board to see that necessary steps are taken for taking up work relating to this high level canal.

*ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ನಮ್ಮ ದೇಶದಲ್ಲಿ ಈಗ ಹಾಲಿ ಮೂರು ದೊಡ್ಡ ನೀರಾವರೀ ಯೋಜನೆಯ ಕೆಲಸಕಾರ್ಯಗಳು ನಡೆಯುತ್ತಾ ಇವೆ. ತುಂಗಾ ಅಣೆಕಟ್ಟು, ಭದ್ರಾಯೋಜನೆ, ಮತ್ತು ನುಗು ಅಣೆಕಟ್ಟು ಇವುಗಳಲ್ಲಿ ನಮಗೆ ಗೊತ್ತಿರುವ ಹಾಗೆ ತುಂಗಾ ಅಣೆಕಟ್ಟಿನ ಕೆಲಸ ಆಗಲೇ ಪೂರೈಸಿ ಕೇವಲ ಸ್ವಲ್ಪ ನಾಲೆಯ ಕೆಲಸ ಮಾತ್ರ ಉಳಿದಿದೆ. ಎರಡನೆಯದು ನುಗು ಪ್ರಾಜೆಕ್ಟು. ನುಗು ಪ್ರಾಜೆಕ್ಟು ಸಹ ಬಹಳ ಭಾಗ ಮುಗಿದು ಅಲ್ಪಸ್ವಲ್ಪ ಕೆಲಸ ಇದ್ದು ಕ್ಷಿಪ್ರದಲ್ಲೇ ಮುಗಿಯುವುದರಲ್ಲಿದೆ. ಇನ್ನು ಉಳಿದಿರುವುದು ಭದ್ರಾ ಅಣೆಕಟ್ಟು. ಇದು ಒಂದು ಮಾತ್ರ ಇದೆ. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ಯರು ಪ್ರಾತನಾಡುತ್ತಾ ಕಾವೇರಿ ಮತ್ತು ಅದಕ್ಕೆ ಸೇರಿದ ಇತರ ಟ್ರಿಬ್ಯೂಟರಿಗಳಲ್ಲಿ ಎಷ್ಟು ಅವಧಿಯೊಳಗೆ ಎಷ್ಟು ಎಕರೆ ಗಳವರೆಗೂ ನೀರನ್ನು ಉಪಯೋಗಿಸಿಕೊಳ್ಳಬಹುದೆಂಬುದನ್ನು ಹೇಳಿದರು. ಮೈಸೂರು ಸರ್ಕಾರಕ್ಕೂ ಮದ್ರಾಸು ಸರ್ಕಾರಕ್ಕೂ ಒಂದು ಅಗ್ರಿಮೆಂಟ್ ಆಗಿ ಈಗಾಗಲೇ 30 ವರ್ಷಗಳು ಕಳೆದುಹೋದವು. ಇನ್ನು ಕೇವಲ ಇರುವುದು 20 ವರ್ಷ ಮಾತ್ರ. ಈ ಅವಧಿಯಲ್ಲಿ ಆ ಅಗ್ರಿಮೆಂಟ್‌ನಲ್ಲಿರತಕ್ಕ ಅನುಕೂಲತೆಯನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು, ಈ ದೃಷ್ಟಿಯಿಂದ ಮೊದಲು ಸರ್ವೇ ನಡಿಸಿ ಯಾವ ಯಾವ ನೀರಾವರಿ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನು ಯೋಚನೆ ಮಾಡಬೇಕು ಎಂಬುದಾಗಿಯೂ ಕೂಡ ಅವರು ಹೇಳಿದರು. ಈಗ ನಾವು ಹೊಸದಾಗಿ ಸರ್ವೇ ಮಾಡಿ ಅದನ್ನು ಯೋಚನೆ ಮಾಡಬೇಕಾದ ಅವಶ್ಯಕತೆ ಇಲ್ಲ. ಈಗಾಗಲೇ ಸರ್ವೇ ಮಾಡಿರತಕ್ಕ ಯೋಜನೆ ಸರ್ಕಾರದ ಮುಂದೆ ಇದೆ. ಅದರಲ್ಲಿ ಬಹಳ ಮುಖ್ಯವಾದದ್ದು: ನಮ್ಮ ಹೇಮಾವತಿ ನದಿಗೆ ಅಡ್ಡಹಾಕಿ ಗೊರೂರು ಬಳಿ ಒಂದು ರಿಸರ್ವಾಯರ್ ಆಗಬೇಕೆಂದು ಕೆಲವು ವರ್ಷಗಳಹಿಂದೆ ಸರ್ವೇ ನಡೆದು ಎಲ್ಲಾ ಸಿದ್ಧತೆಗಳೂ ಆಗಿ, ಎಷ್ಟು ಹಣ ಖರ್ಚಾಗಬಹುದು, ಎಷ್ಟು ಎಕರೆ ಜಮೀನು ಸಾಗುವಳಿಗೆ ಬರಬಹುದು ಎಂಬುದೂ ಕೂಡ ಗೊತ್ತಾಗಿದೆ. ಈ ಯೋಜನೆಗೆ ಸುಮಾರು ಐದು ಕೋಟಿ ರೂಪಾಯಿ ಬೇಕಾಗಬಹುದು. ಸುಮಾರು 45,000 ಎಕರೆ ಈ ರಿಸರ್ವಾಯರ್‌ನ ಹಿಂಭಾಗದಲ್ಲಿ ಬರಬಹುದು ಎಂದು ಹೇಳಿ ಸರ್ವೇ ಮಾಡಿರುವ ಪ್ರಕಾರ ನಮಗೆ ಗೊತ್ತಾಗುತ್ತಾ ಇದೆ. ಈ ಅಣೆಕಟ್ಟಿನಿಂದ ಹಾಸನ ತಾಲ್ಲೂಕು, ಚನ್ನರಾಯಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು, ಈ 5-6 ತಾಲ್ಲೂಕುಗಳಿಗೆ ಬಹಳ ಅನುಕೂಲವಾಗುತ್ತದೆ ಎಂದು ಗೊತ್ತಾಗಿದೆ. ಈ ಅಣೆಕಟ್ಟು ಜರೂರಾಗಿ ಆಗಬೇಕೆಂದು ಆ ಪ್ರಾಂತ್ಯದ ಜನಗಳಿಂದ, ಹತ್ತಾರು ವರ್ಷಗಳಿಂದ ಪದೇಪದೇ ಸರ್ಕಾರದ ಮುಂದೆ ಮನವಿಗಳು ಬರುತ್ತಾ ಇರುವುದು ನಮಗೆಲ್ಲರಿಗೂ ಗೊತ್ತಿದೆ. ಈ ಸಂದರ್ಭದಲ್ಲಿ ನಾವು ಮುಂದಿನ ಐದು ವರ್ಷದ ಯೋಜನೆಗೆ ಯಾವ ಯಾವ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಈಗಿನಿಂದಲೇ ಯೋಚನೆಮಾಡಿ ಇಂಥ ಕೆಲವು ಪ್ರಾಜೆಕ್ಟುಗಳನ್ನು ಅದರಲ್ಲಿ ಸೇರಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮೈಸೂರು ಸಂಸ್ಥಾನಕ್ಕೂ, ಮದರಾಸು ಸಂಸ್ಥಾನಕ್ಕೂ ಆಗಿರತಕ್ಕ ಅಗ್ರಿಮೆಂಟ್ ಪ್ರಕಾರ ಎಷ್ಟು ಹೆಚ್ಚು ಅನುಕೂಲತೆಯನ್ನು ಆ ಅಗ್ರಿಮೆಂಟ್‌ನಿಂದ ಪಡೆಯಬಹುದೋ ಅಷ್ಟನ್ನು ಪಡೆಯುವುದಕ್ಕೆ ಈ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳುವುದು ಬಹಳ ಸೂಕ್ತವಾಗಿದೆ. ಇದನ್ನು ಸಮನದಲ್ಲಿಟ್ಟುಕೊಂಡು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಈ ಪ್ರಾಜೆಕ್ಟುಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ನ್ಯಾಚಿಮ, ಮದ್ರಾಸು ಮತ್ತು ಮೈಸೂರು ಸರ್ಕಾರಗಳಿಗೆ ಒಪ್ಪಂದ ಆಗಿರುವುದರಲ್ಲಿ ಶಿಂಷಾ ನದಿ ಅದರಲ್ಲಿ ಸೇರಿಲ್ಲ ಎಂದು ಕೇಳುತ್ತೇನೆ. ಶಿಂಷಾನದಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಇನ್ನೂ ಬಹಳ ವಾಗಿ ಅವಕಾಶ ಇದೆ. ಮಂಗಳ ಜಲಾಶಯ ಕಟ್ಟಬೇಕೆಂದು ಮೊದಲು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿತ್ತು. ಆದರೆ ಅದಕ್ಕೆ ಸ್ಪೆಟು ನಿರ್ಧರವಾಗದೇ ಹಾಗೆಯೇ ಕೈಬಿಡಬೇಕಾಗಿ ಬಂತು. ಈಗ ಮಾರ್ಕೋನಹಳ್ಳಿಗೆ ಬಲಭಾಗದಲ್ಲಿ ಸುಮಾರು 4-5 ಲಕ್ಷ ರೂಪಾಯಿ ಖರ್ಚು ಮಾಡಿ, ಒಂದು ನಾಲೆಯ ಕೆಲಸ ಈಗ ಪೂರ್ತಿ ಆಗಿದೆ. ಈ ನಾಲಾ ಅಚ್ಚುಕಟ್ಟಿಗೆ ಮಾರ್ಕೋನಹಳ್ಳಿಯಿಂದ ನೀರು ಒದಗಿಸುವುದು ಕಷ್ಟ. ಆದ್ದರಿಂದ ಮಂಗಳ ಜಲಾಶಯವನ್ನು ಅಧಷು ಜಾಗ್ರತೆ ತಾವು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಬೇಕು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಬದ

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಲಾಗಿ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲೇ ಮತ್ತೆ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಿ ಮಾರ್ಕೋನಹಳ್ಳಿ ಬಲಭಾಗದ ನಾಲೆಗೆ ಖರ್ಚಾಗಿರ ತಕ್ಕ 4 ಲಕ್ಷ ರೂಪಾಯಿಗಳಿಗೆ ಉತ್ಪನ್ನ ಬರುವಂತೆ ಮಾಡಬೇಕು. 2,000 ಎಕರೆ ಪ್ರದೇಶಕ್ಕೆ ನೀರು ಒದಗಿಸುವ ಅಂದಾಜಿನಲ್ಲಿ ಆ ನಾಲೆ ಆಗಿದೆ. ಆ ಪ್ರದೇಶ ಕ್ಷಾಮ ಪ್ರದೇಶವಾಗಿರುವುದರಿಂದ ಈ ನಾಲೆಯಲ್ಲಿ ನೀರು ಒದಗಿಸಿ ಈ ಪ್ರದೇಶದ ಜನಗಳಿಗೆ ಸಹಾಯ ಮಾಡುವುದು ಅತ್ಯಾವಶ್ಯಕ. ಆದುದರಿಂದ ಮಂಗಳ ಜಲಾಶಯಕ್ಕೆ ಪ್ರತ್ಯೇಕವಾದ ಸ್ವತಂತ್ರವಾದ ಅಚ್ಚು ಕಟ್ಟು ಮಾಡುವುದಕ್ಕೆ ಬದಲಾಗಿ ಈಗಿರತಕ್ಕ ಅಚ್ಚು ಕಟ್ಟಿಗೆ ಮಾತ್ರ ಈ ನೀರನ್ನೆಲ್ಲಾ ಉಪಯೋಗಿಸುವು ದಕ್ಕೆ ಮಾತ್ರ ಈ ಯೋಜನೆ ಮಾಡಬೇಕು.

ಈಗ ಟೆಕ್ನಿಕಲ್ ಸಮಿತಿಯು ಹೋಗಿ ಪರಿಶೀಲಿಸಿ ದರೂ ಅಲ್ಲಿ ಎಷ್ಟು ನೀರು ಬರುತ್ತದೆ, ಎಷ್ಟು ವ್ಯಯ ಸಾಯ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಇನ್ನೂ ಆಖೈರು ತೀರ್ಮಾನ ಮಾಡದೆ ನಿಂತಿರುವುದು ಬಹಳ ಶೋಚನೀಯ.

ಇನ್ನು ಷಿಂಷಾ ನದಿಗೆ ಅಡ್ಡಲಾಗಿ ನಾಗಮಂಗಲ ತಾಲ್ಲೂಕಿಗೆ ಸೇರಿದಹಾಗೆ ಬೋಳಾರೆ ಹತ್ತಿರ ಒಂದು ಅಣೆ ಕಟ್ಟಬೇಕೆಂಬ ಮನವಿಯಿದೆ. ಈಗಾಗಲೇ ಅದಕ್ಕೆ ಸರ್ವೆಯಾಗಿದೆಯೆಂದು ಕೇಳಿದ್ದೇನೆ. ಅದು ಜಾಗ್ರತೆ ಆಗಬೇಕು. ಹಾಗೆಯೇ ಮಾರ್ಕೋನಹಳ್ಳಿ ನಾಲೆ ಮತ್ತು ವಿಶ್ವೇಶ್ವರಯ್ಯ ನಾಲೆಗಳ ಬೀಳುನೀರು ಹರಿದು ಮ್ಯೆಸೂರು ದೇಶವನ್ನು ದಾಟಿ ಹೋಗುತ್ತಿದೆ, ಹಾಗೆ ಹೋಗುವ ಬೀಳುನೀರು ಸಾವಿರಾರು ಎಕರೆ ವ್ಯವಸಾಯಕ್ಕೆ ಉಪಯೋಗವಾಗಲಿದೆ ಎಂದು ಇಂಜಿನಿ ಯರುಗಳು ಕೆಲವರು ಹೇಳಿದ್ದಾರೆ. ಅದನ್ನು ನೋಡಿ ಆ ರೀತಿ ಅನುಕೂಲವಾಗುವಹಾಗೆ ಮಾಡಬೇಕು.

ನಾಗಿ ಎಂಬ ಮದ್ದೂರು ತಾಲ್ಲೂಕಿಗೆ ಸೇರಿದ ಒಂದು ಗ್ರಾಮವಿದೆ. ಷಿಂಷಾ ನದಿಯ ಎಡ ಭಾಗದಲ್ಲಿ ರುವ ಕೆಲವು ಗ್ರಾಮಗಳಿಗೆ ಅನುಕೂಲವಾಗುವಹಾಗೆ ನಾಗಿಲೆ ಹತ್ತಿರ ಅಣೆಕಟ್ಟು ಕಟ್ಟಿ ಷಿಂಷಾ ನೀರನ್ನು ಉಪಯೋಗಿಸಲು ಸಾಧ್ಯವಿದೆ. ಮಾರ್ಕೋನಹಳ್ಳಿ ಮೇಲೆ ಚಿಕ್ಕ ಮಧುರೆ ಎಂಬ ಗ್ರಾಮದ ಹತ್ತಿರ ಅಣೆ ಕಟ್ಟಲು ಎಸ್ಟಿಮೇಟ್ ಮಾಡಿ ಎಂದು ಚೀಫ್ ಇಂಜಿನಿಯರು ಸ್ಥಳೀಯ ಅಧಿಕಾರಿಗಳಿಗೆ ಹೇಳಿದ್ದಾ ರೆಂದು ಗೊತ್ತಾಗಿದೆ. ಹೀಗೆ ಷಿಂಷಾ ನದಿಗೆ ಈ ಮೂರು ಕಡೆಗಳಲ್ಲಿ, ಬೋಳಾರೆ, ಚಿಕ್ಕ ಮಧುರೆ ಮತ್ತು ನಾಗಿಲೆ ಈ ಮೂರು ಪ್ರದೇಶಗಳಲ್ಲಿ ಅಣೆಕಟ್ಟು ಕಟ್ಟಿ ಅದಷ್ಟು ಜಾಗ್ರತೆ ಜನರಿಗೆ ಅನುಕೂಲ ಪಡಿಸಿಕೊಡ ಬೇಕು.

ಅಲ್ಲದೆ ಈಗ ಸರ್ಕಾರದವರು ಕೈಕೊಂಡಿರುವ ಸೊನ್ನ ನಾಯ್ಕನಹಳ್ಳಿ ಕೆರೆಗೆ ಹೆಚ್ಚು ಹಣ ಒದಗಿಸಿ ಜಾಗ್ರತೆ ಆ ಕೆರೆ ಕೆಲಸ ಪೂರೈಸಬೇಕು. ಹೀಗೆ ಐದಾರು ಪ್ರದೇಶಗಳಲ್ಲಿ ಷಿಂಷಾಕ್ಕೆ ಅಡ್ಡಲಾಗಿ ಕೆರೆ ಗಳು ಮತ್ತು ಅಣೆಕಟ್ಟುಗಳನ್ನು ಕಟ್ಟಿ ಅದರ ನೀರನ್ನು ಉಪಯೋಗಿಸಲು ಸಾಧ್ಯವಿದೆ. ಸರ್ಕಾರ ದವರು ಇದನ್ನು ನೋಡಿ ಈ ನದಿ ನೀರನ್ನು ಸಂಪೂರ್ಣ ವಾಗಿ ಉಪಯೋಗಿಸಿಕೊಳ್ಳಲು ಅನುಕೂಲಪಡಿಸಬೇ ಕೆಂದು ನಲಹೆ ಮಾಡುತ್ತೇನೆ.

*ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಪಂಚ ವಾರ್ಷಿಕ ಯೋಜನೆಯಲ್ಲಿ ಮೈಸೂರು ಸರ್ಕಾರದ ವರು ನಮಗು ಪ್ರಾಜೆಕ್ಟನ್ನು ಕೈಕೊಂಡಿದ್ದಾರೆ. ಇದಕ್ಕೆಹಣ ಕೊಟ್ಟಿದ್ದಾರೆ. ಆದರೆ ಈ ಪ್ರಾಜೆ ಕ್ಟಿಗೆ ತೀವ್ರವಾದ ಗಮನ ಕೊಟ್ಟಿಲ್ಲವೆಂದು ಸಂಬಂಧಪಟ್ಟ ರೆವೆನ್ಯೂ ಮಂತ್ರಿಗಳಿಗೆ ಹೇಳು ತ್ತೇನೆ. ಕಾರಣವನ್ನು ಇದಕ್ಕೆ ಹಿಂದೆ ಒಂದು ಪ್ರಶ್ನೆ ಬಂದಾಗ ತಿಳಿಸಿದ್ದೆ. ಅಲ್ಲಿ ಯಾವುದೋ ಒಂದು ವಿಷಯದಲ್ಲಿ ಇಲಾಖೆಗೂ ಟೆಕ್ನಿಕಲ್ ಕಮಿಟಿಗೂ ಭಿನ್ನಾಭಿಪ್ರಾಯ ಬಂದು ಫ್ಲಡ್‌ಗೇಟ್ ಬೇಗ ಮಾಡಿ ಸಲು ತೊಂದರೆಯಾಗಿದೆ. ಆ ಕೆಲಸವಾಗಿದ್ದರೆ ಇದು ವರೆಗೆ 60 ಅಡಿ ನೀರನ್ನು ಶೇಖರಿಸಬಹುದಾಗಿತ್ತು. ಅಲ್ಲಿನ ಎಗ್ಸಿಕ್ಯುಟಿವ್ ಇಂಜಿನಿಯರು ಬಹಳ ಮುತ ವರ್ಜಿಯಿಂದ ಕೆಲಸ ಮಾಡುತ್ತಾರೆ. ಆದರೆ ಟೆಕ್ನಿ ಕಲ್ ಸಮಿತಿಯ ಅಭಿಪ್ರಾಯ ಪಡೆದು ಫ್ಲಡ್‌ಗೇಟ್ ಮಾಡುವುದರಲ್ಲಿ ನಿಧಾನವಾಗುತ್ತಿದೆ. ಇದರಿಂದ ನೀರನ್ನು ಶೇಖರಿಸುವುದಕ್ಕೂ ತೊಂದರೆಯಾಗಿದೆ.

ಇದಲ್ಲದೆ ಇನ್ನೊಂದು ವಿಷಯವೇನೆಂದರೆ : ನಾಗು ಪ್ರಾಜೆಕ್ಟಿನಿಂದ ಬರುವ ನಾಲೆಯೇನಿದೆ ಅದಕ್ಕೆ ಒಂದು ಪುಟ್‌ಬ್ರಿಡ್ಜ್ ಕಟ್ಟಿ ಜನ ಜಾನುವಾರುಗಳ ಸಂಚಾರಕ್ಕೆ ಅನುಕೂಲ ಮಾಡಬೇಕಾಗಿದೆ. ಒರಿಜಿನಲ್ ಎಸ್ಟಿ ಮೇಟ್ ಪ್ರಕಾರ ಇದಕ್ಕೆ ಮಂಜೂರಾತಿ ದೊರೆತಿದ್ದರೂ ಅಲ್ಲಿ ಬೇಕಾದ foot bridge ಮತ್ತು ಕಾರ್ಟ್ ಬ್ರಿಡ್ಜ್ ಮಾಡದೆ ನುತ್ತು ಮುತ್ತಿನ ಹಳ್ಳಿಗರ ಸಂಚಾರ ಸೌಕರ್ಯಕ್ಕೆ ವಿಪರೀತ ತೊಂದರೆಯಾಗಿದೆ. ಕೆಲವು ಕಡೆ ಹಳ್ಳಿಯವರು ಅಲ್ಲಿರುವ ಪ್ರದೇಶ ಬಿಟ್ಟು ಮೇಲು ಭಾಗದಲ್ಲಿ ಮನೆ ಕಟ್ಟಿ ಕೊಳ್ಳಬೇಕಾದ ಪರಿ ಸ್ಥಿತಿಯಿದೆ. ಉದಾಹರಣೆಗೆ ಕದಜಟ್ಟಿಗುಂಟೆ ಮತ್ತು ಅರಿವು ಗ್ರಾಮಗಳವರು ನೀರಿನ ವಸತಿಯಿಂದ ಬಹಳ ತೊಂದರೆಗೀಡಾಗಿ ಮೇಲ್ಗಡೆ ಮನೆ ಕಟ್ಟಿಕೊಳ್ಳಬೇಕಾ ಗಿದೆ. ಅಂಥಕಡೆ ಸೇತುವೆ ಮಾಡುವ ಅವಶ್ಯಕತೆಯಿದೆ ಎಂದು ಅಸಿಸ್ಟೆಂಟ್ ಇಂಜಿನಿಯರಿಗೆ ಮತ್ತು ಸಂಬಂಧ ಪಟ್ಟ ಅಧಿಕಾರಿಗಳಿಗೆ ನೈತರು ಹೇಳಿದರೆ ಅವರು ಒರ ಟಾಗಿ ಉತ್ತರಕೊಟ್ಟರೆಂದು ಹೇಳುತ್ತಾರೆ. ಖಂಡಿತ ಸರ್ಕಾರ ಇದನ್ನು ವಿಚಾರ ಮಾಡಿ ಅನುಕೂಲಮಾಡಿ ಕೊಡಬೇಕು. ಹಿಂದೆ ನಮಾರು 6 ಲಕ್ಷ ರೂಪಾಯಿ ಗಳಿಗೆ ಎಸ್ಟಿಮೇಟಾಗಿತ್ತು. Foot bridges ಮಾಡಬೇಕೆಂದಿದ್ದರು, ಅದೇ ಹಣದಲ್ಲಿ ಇನ್ನೂ ನಾಲ್ಕೈದು ಸೇತುವೆ ಮಾಡಬಹುದಾಗಿತ್ತು ಎಂದು ಹೇಳುತ್ತಾರೆ. ಆದ್ದರಿಂದ ಈ ವಿಷಯವನ್ನು ಪುನರ್ವಿ ಮರ್ಶೆ ಮಾಡಿ foot bridges ಮುಂತಾದವಕ್ಕೆ ಅವ ಕಾಶ ಮಾಡಬೇಕು.

ಇದರ ಜೊತೆಯಲ್ಲಿ ಇನ್ನೊಂದು ವಿಷಯವನ್ನು ಗಮ ನಕ್ಕೆ ತರಬೇಕಾಗಿದೆ. ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಳ್ಳುವಾಗ ಸಣ್ಣ ಪುಟ್ಟ ಅಣೆಕಟ್ಟುಗಳನ್ನು ಅಂದರೆ ಪಿಕಪ್‌ಗಳನ್ನು ಕೈಕೊಂಡರೆ 100 ರಿಂದ 500 ಎಕರೆ ಗಳವರೆಗೆ ಜಮಾನನ್ನು ತರಿ ಸಾಗುವಳಿ ಮಾಡಬಹುದು. ನಮ್ಮ ತಾಲ್ಲೂಕಿನಲ್ಲಿ ಈ ರೀತಿ ಕೆಲಸ ಕೈಕೊಳ್ಳಲು ಅನುಕೂಲವಾದ ಒಂದು ಗ್ರಾಮವಿದೆ. ಎಣ್ಣೆ ಹೊಳೆ ಅಣೆ ಕಟ್ಟು ಕಟ್ಟಿದೆ. ಬಹಳ ಒಳ್ಳೆಯದು. ಇದಕ್ಕೆ ಎಸ್ಟಿ ಮೇಟ್ ಆಗುತ್ತಿದೆಯೆಂದು ಹೇಳಿದ್ದರು, ಅದಾಯತ ಅಥವಾ ಯಾವ ಮಟ್ಟದಲ್ಲಿದೆ, ಮಂಜೂರಾಗಿದೆಯೆ ಎಂಬ ವಿಷಯ ಗೊತ್ತಾಗಲಿಲ್ಲ. ನಮಾರು 23 ಲಕ್ಷ ರೂಪಾಯಿಗಳ ಕೆಲಸ ಸಾಗುತ್ತಿದೆ. ಕೂಡ್ಲಾಪುರ ಗ್ರಾಮದವರು ತಾವೇ ನಾಲೆ ತೆಗೆಯುತ್ತೇವೆ, ಸರ್ಕಾರದ ಹಣ ಬೇಕಾಗಿಲ್ಲ ಎಂದು ಹೇಳಿದ್ದಾರೆ ಎಂಬ ಭಾವನೆಯಿದೆ. ದೊಡ್ಡ ಯೋಜನೆ ಮಾಡುವಾಗ ಇಂಥ ಸಣ್ಣ ಯೋಜನೆಗಳನ್ನು ಕೈ ಕೊಂಡರೆ ಹೆಚ್ಚು ಜಮಾನ ಆಬಾದಾಗುವುದೂ ಅಲ್ಲದೆ ಆಹಾರದ ಕೊರ ತೆಯೂ ತಪ್ಪುತ್ತದೆ; ಅದರ ಜೊತೆಗೆ ಸ್ವಪರಿಪೂರ್ಣ ತೆಯೂ ಉಂಟಾಗುತ್ತದೆ. ಕೂಡ್ಲಾಪುರದ ಸಣ್ಣ

ಯೋಜನೆ ಕೈಕೊಂಡರೆ ಅಲ್ಲಿನ ಜನರಿಗೂ ಉಪಕಾರ ವಾಗುತ್ತದೆ. ತಾವು ಹಣವನ್ನು ಸದುಪಯೋಗಪಡಿಸ ಬೇಕಾದರೆ ನಿಜವಾಗಿಯೂ ಇಂಥ ಕಾರ್ಯಗಳನ್ನು ಕೈಕೊಳ್ಳಬೇಕು. ನಂಜನಗೂಡು ತಾಲ್ಲೂಕಿಗೆ ವಿಶೇಷ ಗಮನ ಕೊಟ್ಟು ಅಲ್ಲಿ ಒಂದು ನಿರ್ದಿಷ್ಟವಾವ ನೀತಿ ಯನ್ನು ಅನುಸರಿಸಬೇಕು. ಸಣ್ಣಪುಟ್ಟ ಪಿಕಪ್ ಮಾಡು ವುದು, ಅಣೆಕಟ್ಟು ಕಟ್ಟುವುದು ಅಲ್ಲದೆ ಅದೇ ರೀತಿ ನೀರಾವರಿಗ ಸಂಬಂಧಪಟ್ಟ ದೊಡ್ಡ ದೊಡ್ಡ ಕೆರೆಗ ಳನ್ನು ಜೀರ್ಣೋದ್ಧಾರ ಮಾಡಬೇಕು. ಇದಕ್ಕೆ ಒಂದು ಪಟ್ಟಿ ಮಾಡಿ ಪ್ಲಾನ್ಡ್ ಬೇಸಿಸ್‌ಮೇಲೆ ಯಾವ ಒಂದು ಇಷ್ಟೊಯೆನ್ಸಿಗೂ ಅವಕಾಶ ಕೊಡದೆ ಪ್ರಯಾ ರಿಟಿ ಪ್ರಕಾರ ಮಾಡಬೇಕು. ಯಾವ ಕೆರೆ ಕೆಳಗೆ ಎಷ್ಟು ಅಚ್ಚುಕಟ್ಟಿದೆಯೆಂಬುದಕ್ಕೆ ಒಂದು ಪಟ್ಟಿ ತಯಾರಿಸಿ ತಮ್ಮ ಮುಂದಿಟ್ಟುಕೊಂಡು ವರ್ಷಕ್ಕೆ ವರ್ಷಕ್ಕೆ ಇಷ್ಟು ಎಂದು ಕೆರೆಗಳನ್ನು ಆಬಾದು ಮಾಡಿದರೆ ದೇಶಕ್ಕೂ ಉಪಕಾರವಾಗುತ್ತದೆ. ಉದಾಹರಣೆಗೆ ನರಸಾಂ ಬುಧಿಕೆರೆ ನಂಜನಗೂಡು ತಾಲ್ಲೂಕಿನಲ್ಲಿರುವುದು ದೊಡ್ಡಕೆರೆ. ನಿಜವಾಗಿಯೂ ಕೂಡ ಈ ದಿವಸ ವರ್ಷಕ್ಕೆ ಎಷ್ಟು ಬೇಕೋ ಅಷ್ಟು ನೀರು ಆ ಕೆರೆಯಲ್ಲಿ ನಿಲ್ಲುತ್ತಿಲ್ಲ. ಇಷ್ಟು ದೊಡ್ಡ ಕೆರೆಯ ಹಿಂದಿರುವ ಅಚ್ಚು ಕಟ್ಟಿಗೆ ನೀರು ಸಾಲದೆ ತೊಂದರೆಯಾಗಿದೆ. ಆದರೆ ರೈತರಿಂದ ಮಾತ್ರ ಬರಬೇಕಾದ ಹಣ ವಸೂಲಾಗು ತ್ತಿದೆ. ಹೋದ ಸಾರಿ ರೈತರು ಕೆರೆಯಲ್ಲಿ ನೀರಿರಲಲ್ಲ, ಕಂದಾಯ ಕಡಮೆ ಮಾಡಿ ಎಂದು ಹೇಳಿದರು. ಆದರೆ ಅಧಿಕಾರಿಗಳು ಮಾಡುತ್ತೇವೆಂದು ಭರವಸೆ ಕೊಟ್ಟು ಅನಂತರ ಆಗುವುದಿಲ್ಲವೆಂದು ಉತ್ತರ ಹೇಳಿದ್ದಾರೆ. ಇಂಥ ಒಂದು ಪರಿಸ್ಥಿತಿಯಿರುವಾಗ ಜನರಿಗೆ ನಿಜವಾ ಗಿಯೂ ಉಪಕಾರವಾಗುತ್ತದೆಯೆ? ಉಪಕಾರ ಮಾಡಬೇಕಾದರೆ ದೊಡ್ಡ ದೊಡ್ಡ ಕೆರೆಗಳ ವಿಷಯದಲ್ಲಿ ನಿರ್ದಿಷ್ಟ ಯೋಜನೆ ಮಾಡಿ ಪ್ರಯೋರಿಟಿ ಪ್ರಕಾರ ಕೆಲಸ ಮಾಡಬೇಕು. ಹಾಗೆ ಮಾಡಿದರೆ ಬೇಗ ಭೂಮಿಯನ್ನು ನೀರಾವರಿಗೆ ತರಬಹುದು. ಅದರಿಂದ ಉಪಕಾರವೂ ಆಗುತ್ತದೆ, ಒಂದೊಂದು ಇರಾಖೆಗೆ ಮೂರು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುವುದು ನದ್ದಿನಿ ಯೋಗವಾಗುತ್ತದೆಂದು ಹೇಳಿ ನನ್ನ ಭಾಷಣ ಮುಗಿ ಸುತ್ತೇನೆ.

*Sri Kadidal MANJAPPA (Minister for Revenue and Public Works).—Mr. Speaker, Sir, Hon'ble members have referred to the need for taking some other projects, especially, projects in the Cauvery Valley in accordance with the agreement entered into between this Government and the Government of India. There is some force in what Sri Srinivasa Iyengar suggested. Government is anxious to take up all the projects provided funds are available. The Government of India and the Planning Commission have, on more than one occasion, asked us to complete the works already on hand before taking up new works. For instance, Sir, we wanted to take the Kapini Project which comes under the 1924 agreement. We had appointed an Assistant Engineer. In the meanwhile, we got a letter from the Planning Commission asking us not to proceed with the work on the ground that we must try to implement the first Five-Year Plan before taking up new works. Therefore, we had to stop the work and the matter is under correspondence.

As regards the Reservoir across Hemavathi near Gorur, as my friend Sri Lakkappa said, survey has been done, but it is a very costly scheme.

Sri K. LAKKAPPA.—Only five crores.

Sri Kadidal MANJAPPA.—Yes, five crores and the area that is to be benefited is 45,000 acres. From the technical point of view the project is not very beneficial. I am not going to give a final opinion on that matter. Anyhow, during the first Five-Year Plan period, it may not be possible to take the work. We will investigate the possibilities of including this scheme, if it is beneficial, in the next Five-Year Plan. Hon'ble member Sri Linganna said that the Nugu project is not progressing well. At the same time he said that the Executive Engineer in charge of the work is very brisk and is very energetic. In a way it is contradictory. The work is progressing well. But due to the unavailability of the gates, we could not give water to a few thousands of acres which could have been done if it was possible for us to obtain the gates. As you all know very well, we have to rely upon the technical opinion so far as gates are concerned. There was difference of opinion regarding the gates between the Technical Advisory Committee and the Chief Engineer and after the matter was finally decided, we have placed orders for the gates and we will be able to get them, I am sure, within one year.

Then, Sir, Sri Huchmasthy Gowda referred to the need for taking up Mangala Reservoir. This is a work included in the Five-Year Plan and we are anxious to take up the work. Once again here, there was difference of opinion regarding the site between the public on the one hand and the Engineers on the other and between the Engineers themselves. Therefore, it was decided to conduct gauging for a

(SRI KADIDAL MANJAPPA.)

period of two years. In lieu of this we have proposed to take another project which is equally important, namely, Sonnaikanahalli Project and I think, we will be able to commence the work early next year. I am afraid I have no time to answer all the points raised by Hon'ble members.

The Hon'ble member Sri Srinivasa Iyengar referred to the high level canal pertaining to the Tungabhadra project and also the sharing of the Krishna waters. The question of sharing of the Krishna waters is not finally decided. The matter is under correspondence.

Sri S. SRINIVASA IYENGAR.—But you must be careful.

Sri Kadidal MANJAPPA.—We are very careful. (*Laughter.*) He said that the hydro-electric project at Tungabhadra is very costly. I perfectly agree with him. But by the time Bellary was integrated to Mysore, some crores of money had been spent for purchasing the equipment. Therefore it was not possible for this Government or the Andhra Government to abandon the scheme. No doubt we would be satisfied with the Shimsha Project because it would be more advantageous and less costly than this project. But we cannot help taking up the other scheme.

Sri S. SRINIVASA IYENGAR.—It was a *fait accompli !*

Sri Kadidal MANJAPPA.—Yes. In these circumstances, the Government are doing their best to take up new projects if funds are available.

Mr. SPEAKER.—The question is:

"That a sum not exceeding Rs. 3,33,96,000 be granted to the Government to defray the charges which will come in course of payment during the year ending 31st day of March 1955, in respect of 'Construction of Irrigation, Navigation, Embankment and Drainage Works outside the Revenue Account'."

The motion was adopted.

DEMAND No. 42—ELECTRICITY SCHEMES

81-A.—CAPITAL OUTLAY ON ELECTRICITY SCHEMES

Mr. SPEAKER.—Motion moved:

"That a sum not exceeding Rs. 2,40,07,000 be granted to the Government to defray the charges which will come in course of payment during the year ending 31st day of March 1955, in respect of 'Capital Outlay on Electricity Schemes'."

Sri V. M. MASCARENHAS (St. John's Hill).—Mr. Speaker, Sir the department has already given the danger signal, that within a year if these schemes are not taken up electricity for further consumption will be cut off. It is therefore high time that the Government should seriously consider the question of taking up some important schemes. Electrical schemes are not so simple. They take at least 5 to 10 years before they mature. I would therefore earnestly draw the attention of the Government not to sleep over this matter but to give immediate attention to the Honnemaradu Project though it is costly. I was told by the Hon'ble Minister for Electricity that the Shimsha Scheme is almost complete and will be taken up. But this scheme has an output of hardly 10,000 kilowatts. I do not think that it will solve the problem at all. Honnemaradu must be taken up. I trust the Government will take it up as soon as possible.

Sri R. ANANTARAMAN (Chamarajpet).—I want to raise a discussion that the electricity for irrigation pumps is not supplied to certain villages in Gubbi Taluk, namely Thigalarapalya, Madenhalli, Thosehalli, Vadalur and Kadaba of Gubbi Taluk. This question was also brought forward before this House during the last session. These five or six villages are in very low level. There are many cocoanut gardens, betel leaf gardens, plantain gardens, etc., and representations have been made to the Hon'ble Minister to take up these schemes. The other day a question was put by Sri N. Hutchmasthy Gowda and answer given was that

electricity for irrigation pumps would be supplied to Nittoor and Kadaba. In fact if a line is taken from Gubbi to Nittoor and then to Kadaba, instead of taking it directly, the line can be taken on these villages also, so that they may also get full benefit. An assurance was also given last time. I was told that the estimate has also been approved. Till now the work has not been taken up. Therefore I urge upon the Government to take up the schemes as early as possible.

*ಶ್ರೀ ವಿ. ಮುಸಿಯಪ್ಪ (ಹಿರಿಯೂರು).—ಸ್ವಾಮಿ, ಈ ಡಿಮ್ಯಾಂಡ್ ಬಗ್ಗೆ ಸರ್ಕಾರದ ಗಮನಕ್ಕೆ ಒಂದೆರಡು ವಿಚಾರಗಳನ್ನು ತರಬೇಕಾಗಿದೆ. ಹಿರಿಯೂರು ತಾಲ್ಲೂಕಿನ ಗಡಿಯಲ್ಲಿ ಮುರಾಮತ್ ಇಲಾಖೆಯವರು ಕೆಲವು ನೀರಾವರಿ ಕಾಮಗಾರಿ ಕೆಲಸಗಳನ್ನು ಕೈಗೊಂಡಿರುತ್ತಾರೆ. ಅವುಗಳಲ್ಲಿ ಒಂದು ಕರಿಯಾಲ ಪ್ರಾಜೆಕ್ಟ್, ಇನ್ನೊಂದು ಗಾಯತ್ರಿ ರಿಜರ್ವಾಯರ್ ಮತ್ತು ನಾರಣಾಪುರ ಅಣ್ಣೆಕಟ್ಟಿನ ಕೆಲಸ. ಈ ನೀರಾವರಿ ಕೆಲಸಕ್ಕೆ ಸಂಬಂಧಿಸಿದ ಹಾಗೆ ವಿದ್ಯುಚ್ಛಕ್ತಿಯ ಅವಶ್ಯಕತೆ ಬಹಳ ಜರೂರಾಗಿದೆ. ಅಲ್ಲಿ ನೀರು ಯಥೇಚ್ಛವಾಗಿರುವುದರಿಂದ ಆ ನೀರನ್ನು ಎತ್ತುವುದಕ್ಕೆ ಇಲಾಖೆಯವರು ಶ್ರಮಿಸುತ್ತಿರುವ ಕೆಲಸ ಮುಂದು ವರಿಯಲು ನಿಧಾನವಾಗಿದೆ. ಇದಕ್ಕೆ ವಿದ್ಯುಚ್ಛಕ್ತಿ ಪಂಪುಗಳ. ಸಹಾಯವಿದ್ದರೆ ಈ ಕೆಲಸ ಜಾಗ್ರತೆ ಮುಂದುವರಿಯಲು ಅನುಕೂಲವಾಗುತ್ತದೆ. ಈಗಾಗಲೇ ಅಲ್ಲಿಯ ಅನೇಕ ಗ್ರಾಮಗಳಿಂದ ಸುಮಾರು 4,000 ಬಾವಿಗಳಿಗೆ ನೀರಾವರಿ ಪಂಪುಗಳನ್ನು ಹಾಕಿಸಿಕೊಳ್ಳಲು ವಿದ್ಯುಚ್ಛಕ್ತಿ ಬೇಕೆಂದು ಅರ್ಜಿಗಳು ಸರ್ಕಾರಕ್ಕೆ ಸಂದಿವೆ. ಅವರ ಭಾಗದ ಹಣವನ್ನು ಸಹ ಡಿಪಾಜಿಟ್ ಮಾಡಿರುತ್ತಾರೆ. ಈ ಬಗ್ಗೆ ಸರ್ಕಾರದವರು ತ್ವರಿತ ಕಾರ್ಯಕ್ರಮ ಕೈಗೊಂಡು ಅದಷ್ಟು ಜಾಗ್ರತೆಯಾಗಿ ಈ ಸೌಲಭ್ಯವನ್ನು ಅವರಿಗೆ ಕಲ್ಪಿಸಿ ಕೊಡಬೇಕೆಂದು ಕೋರುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ತಿಳಿಸಲಿಚ್ಛಿಸುತ್ತೇನೆ. ದಾವಣಗೆರೆ ತಾಲ್ಲೂಕಿನಲ್ಲಿ ಆನೆಕೊಂಡ, ನೀಲನಹಳ್ಳಿ ಮತ್ತು ಶ್ಯಾಬನೂರು ಎಂಬ ಮೂರು ಗ್ರಾಮಗಳಿವೆ. ಅಲ್ಲಿನ ಗ್ರಾಮಸ್ಥರು ಎಷ್ಟೋ ವರ್ಷಗಳಿಂದ ವಿದ್ಯುಚ್ಛಕ್ತಿ ಬೇಕೆಂದು ಕೇಳುತ್ತಲೇ ಇದ್ದಾರೆ. ಇದುವರೆಗೂ ಆ ಬಗ್ಗೆ ಅವರ ತೊಂದರೆ ಏನೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ. ದಯವಿಟ್ಟು ಆ ಗ್ರಾಮಗಳಿಗೆ ಮೊದಲು ವಿದ್ಯುಚ್ಛಕ್ತಿ ಒದಗಿಸಿಕೊಡಬೇಕೆಂದು ವಿನಯ ಪೂರ್ವಕವಾಗಿ ಅರಿಕೆಮಾಡುತ್ತೇನೆ. ಈ ಗ್ರಾಮಗಳಿಗೆ ಅತಿ ಸಮೀಪದಲ್ಲಿರತಕ್ಕ ಕಡ್ಲೇಬ್ಯಾಲು ಎಂಬುದಕ್ಕೆ ಸಹ ವಿದ್ಯುಚ್ಛಕ್ತಿ ದೊರಕಿದೆ. ಈ ಗ್ರಾಮಸ್ಥರು 8-10 ವರ್ಷಗಳಿಂದಲೂ ವಿದ್ಯುಚ್ಛಕ್ತಿ ಬೇಕೆಂದು ಕೇಳುತ್ತಿದ್ದರೂ ಇದುವರೆಗೂ ಆ ವಿಚಾರಕ್ಕೆ ಸರ್ಕಾರ ಗಮನ ಕೊಡದೆ ಇರುವುದು ಶೋಚನೀಯ. ಈಗಲಾದರೂ ಈ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲಿಸಿ ಅತಿ ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನೊಗಿಸ ಬೇಕೆಂದು ಕೋರುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈ ಡಿಮ್ಯಾಂಡನ್ನು ವಿರೋಧಿಸುತ್ತಾ ಗ್ರಾಮಾಂತರ ಪ್ರದೇಶಗಳಿಗೆ ನಮ್ಮ ಸಂಸ್ಥಾನದಲ್ಲಿ ಸಾಕಾದಷ್ಟು ವಿದ್ಯುಚ್ಛಕ್ತಿ ಸೌಕರ್ಯವನ್ನೊದಗಿಸದೆ ಇರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಹೇರಳವಾಗಿದ್ದರೂ ಕೇವಲ ಸ್ವಲ್ಪ ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿ ಸರಬರಾಯಿ ಆಗಿರುವುದೆಂದರೆ ವಿಷಾದಕರವಾದ ಸಂಗತಿ. ಮದ್ರಾಸ್ ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉತ್ಪತ್ತಿ ಮಾಡುವುದಕ್ಕೆ ಪ್ರಾರಂಭಿಸಿದ ಮೇಲೆ ಸುಮಾರು 2½ ಸಾವಿರ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಿರುತ್ತಾರೆ. ಅದೇ ನಮ್ಮಲ್ಲಿ ಕೇವಲ 189 ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿ ಸೌಕರ್ಯ ಕಲ್ಪಿಸಿದೆಯೆಂದರೆ, ಈ ಸೌಕರ್ಯವು ಎಷ್ಟು ಮಟ್ಟಿಗೆ ಸಾಲದಾಗಿದೆಯೆಂಬುದು ಈ ಅಂಕಿಅಂಶಗಳಿಂದಲೇ ಗೊತ್ತಾಗುತ್ತದೆ. ಗ್ರಾಮಾಂತರ ಪ್ರದೇಶಗಳು ಅಭಿವೃದ್ಧಿಸ್ಥಿತಿಗೆ ಬರಬೇಕಾದರೆ ಆ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಸೌಕರ್ಯ ಬಹುಮಟ್ಟಿಗೆ ಅವಶ್ಯಕವೆಂಬುದನ್ನು ನಾನು ಮತ್ತೆ ಹೇಳಬೇಕಾಗಿಲ್ಲ. ನಮ್ಮ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಹೇರಳವಾಗಿದೆ. ಆದರೆ ಸೌಕರ್ಯವನ್ನು ಅಪೇಕ್ಷಿಸುವ ನಾನಾಭಾಗಗಳಿಗೆ ಅದನ್ನು ಒದಗಿಸಿಕೊಡುವ ವಿಚಾರದಲ್ಲಿ ಸರ್ಕಾರದವರು ನಿಧಾನಮನೋಭಾವವನ್ನು ತಾಳುತ್ತಿರುವುದು ಜನತೆಯಲ್ಲಿ ನಿರುತ್ಸಾಹವನ್ನುಂಟುಮಾಡಿದೆ. ಇತರ ದೇಶಗಳಲ್ಲಿ ಕೈಗಾರಿಕಾಪ್ರಗತಿ ಎಷ್ಟರಮಟ್ಟಿಗೆ ಸಾಗುತ್ತಿದೆಯೆಂಬುದನ್ನರಿತು, ಈ ಕೈಗಾರಿಕಾಪ್ರಗತಿಗೆ ಮುಖ್ಯ ಆಧಾರವಾದ ವಿದ್ಯುಚ್ಛಕ್ತಿಯನ್ನು ನಮ್ಮ ಸರ್ಕಾರದವರು ಸಂಸ್ಥಾನಾದ್ಯಂತ ಹೆಚ್ಚಿಸಿಕೊಂಡು ಹೋಗುವುದು ವಿವೇಕಯುತವಾದ ಮಾರ್ಗವೆಂದು ಒತ್ತಾಯಪೂರ್ವಕವಾಗಿ ತಿಳಿಸುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ನಮ್ಮ ಮೈಸೂರು ದೇಶದ ನಾನಾ ಜಿಲ್ಲೆಗಳು ಈ ವಿದ್ಯುಚ್ಛಕ್ತಿ ಸೌಕರ್ಯವನ್ನು ಪಡೆದಿರುವಷ್ಟು ಮಟ್ಟಿಗೆ ನಮ್ಮ ಜಿಲ್ಲೆ ಪಡೆದಿಲ್ಲ. ನಮ್ಮ ಜಿಲ್ಲೆಯಲ್ಲಿ ಈ ವಿದ್ಯುಚ್ಛಕ್ತಿ ಸೌಲಭ್ಯವಿಲ್ಲದೆ ಇರುವ ಸುಮಾರು 2-2½ ಸಾವಿರ ಗ್ರಾಮಗಳಿವೆ. ಈ ಸೌಕರ್ಯವನ್ನು ಪಡೆಯಲು ಈಗ್ಗೆ 3-4 ವರ್ಷಗಳಿಂದ ಎಷ್ಟು ಪ್ರಯತ್ನಪಟ್ಟರೂ ಅದು ಫಲಕಾರಿಯಾಗಿಲ್ಲ. ಸಂಸ್ಥಾನದಲ್ಲೇನೋ ವಿದ್ಯುಚ್ಛಕ್ತಿ ಹೇರಳವಾಗಿದೆ. ಹೀಗಿದ್ದರೂ ಸರ್ಕಾರದವರು ನಮ್ಮ ಜಿಲ್ಲೆಯಲ್ಲಿರುವ ಗ್ರಾಮಾಂತರ ಪ್ರದೇಶಗಳಿಗೆ ಈ ಸೌಕರ್ಯ ಕಲ್ಪಿಸಿಕೊಡುವ ವಿಚಾರದಲ್ಲಿ ಉದಾಸೀನಮಾಡುತ್ತಿರುವುದು ಅರ್ಥವಾಗಿಲ್ಲ. ವಿದ್ಯುಚ್ಛಕ್ತಿಯನ್ನು ಒದಗಿಸಿದಷ್ಟೂ ಆ ಗ್ರಾಮಗಳು ಅಭಿವೃದ್ಧಿಗೆ ಬರಲು ಅನುಕೂಲವಾಗುತ್ತವೆಯೆಂಬುದನ್ನು ಮನಗಂಡು ಅದಷ್ಟು ಜಾಗ್ರತೆ ಈ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಒತ್ತಾಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಈ ಡಿಮ್ಯಾಂಡ್ ಮನವಿಯನ್ನು ವಿರೋಧಿಸುತ್ತಾ, ಹೊನ್ನೆಮರಡು ಪ್ರಾಜೆಕ್ಟಿನ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಸ್ವಾಮಿ, ಈಗಾಗಲೇ ಹೊನೆಮರಡು ಪ್ರಾಜೆಕ್ಟಿನ ವಿಷಯವಾಗಿ ಶ್ರೀ ಮ್ಯಾನರ್ಹಾಸ್ಸರವರು ಹೇಳಿದ್ದಾರೆ. ಈ ಸಭೆಯಲ್ಲಿ ಒಂದೆರಡು ಸಂದರ್ಭಗಳಲ್ಲಿ ಹೊನೆಮರಡು ಪ್ರಾಜೆಕ್ಟಿನ ಬಗ್ಗೆ ಸರ್ಕಾರದವರು ಕೆಲವು ಉತ್ತರಗಳನ್ನು ಸಹ ಕೊಟ್ಟಿದ್ದಾರೆ. ನಾನು ಈಗ ಈ ಸಂದರ್ಭದಲ್ಲಿ ಸರ್ಕಾರದವರಿಗೆ ಒತ್ತಾಯವಾಗಿ ಹೇಳಬೇಕಾದ ಒಂದು ಅಂಶ ಇದೆ.

(ಶ್ರೀ ಎಸ್. ಗೋಪಾಲಗೌಡ.)

ಏನೆಂದರೆ ಹಿರೇಭಾನ್ಕರ ಅಣೆಕಟ್ಟು ಆದಮೇಲೆ ಮುಳುಗಡೆ ಪ್ರದೇಶ ಯಾವುದು ಉಂಟಾಯಿತೋ ಅಲ್ಲಿ ವಾಸವಾಗಿದ್ದವರಿಗೆ ಸರ್ಕಾರದವರು ಯಾವ ರೀತಿಯ ಒಂದು ಸೌಲಭ್ಯವನ್ನೂ ಒದಗಿಸಿಕೊಟ್ಟಿಲ್ಲ, ಸಂಚಾರ ಸೌಲಭ್ಯವಾಗಲಿ, ವಿದ್ಯಾಭ್ಯಾಸ ಸೌಲಭ್ಯವಾಗಲೀ, ಯಾವುದೇ ಆಗಲಿ ಅವರು ಕೇಳಿದರೂ ಕಣ್ಣೆತ್ತಿ ನೋಡಿಲ್ಲ. ಇತ್ತೀಚೆಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳು ಒಮ್ಮೆ ಅಲ್ಲಿಗೆ ಭೇಟಿಕೊಟ್ಟು ಆ ಪ್ರದೇಶವನ್ನೆಲ್ಲಾ ನೋಡಿಕೊಂಡು ಬಂದು ಸರ್ಕಾರದವರಿಗೆ ಬಹುಶಃ ಒಂದು ವರದಿ ಮಾಡಿರಬಹುದು. ಅದು ನಿರ್ಜನ ಪ್ರದೇಶವಾಗಿದ್ದು ಕಾಡಿನ ಮಧ್ಯೆ ಇದ್ದು ಅಲ್ಲಿ ಯಾವ ಒಂದು ನಾಗರೀಕತೆಯ ಲಕ್ಷಣವೂ ಇಲ್ಲ. ದೊಡ್ಡ ದೊಡ್ಡ ಕಾಂಗಾರಿಗಳನ್ನು ಕೈಕೊಳ್ಳುವಾಗ ಅಲ್ಲಿ ವಾಸವಾಗಿರುವ ಜನರ ಪುನರ್‌ವ್ಯವಸ್ಥೆಯ ಬಗ್ಗೆ ಸರ್ಕಾರಗಳು ಯಾವ ವ್ಯವಸ್ಥೆಯನ್ನೂ ಮಾಡುವುದಿಲ್ಲ, ಹೆಸರಿಗೆ ನಾಗರಿಕ ಸರ್ಕಾರ ಎಂದು ಕರೆದುಕೊಳ್ಳುವುದಾಗಿದೆ. ಅಸ್ತಿಪಾಸ್ತಿ ಇದ್ದವರಿಗೆ ಅವರ ಆಸ್ತಿ ಮುಳುಗಡೆಯಾದಲ್ಲಿ ತಾವು ಒಂದಷ್ಟು ದುಡ್ಡು ಕೊಡುತ್ತೀರಿ. ಕೆಲವರು ಮೋಟಾರ್ ಸೈಕಲ್ ಮುಂತಾದುವನ್ನು ಕೊಂಡುಕೊಂಡು ವ್ಯರ್ಥಮಾಡಿಕೊಳ್ಳುತ್ತಾರೆ, ಇನ್ನು ಕೆಲವರು ಮನೆ ಕೊಳ್ಳುತ್ತಾರೆ, ವ್ಯಾಪಾರ ಗಾರರಾಗಿ ಅಂಗಡಿ ಇಡುತ್ತಾರೆ, ಕೊನೆಗೆ ಪಾಪರ್ ಆಗಿ ಬೇರೆ ಕೆಲಸಕ್ಕೆ ಹೋಗುತ್ತಾರೆ. ಹೀಗಾಗಿ ರೈತರು ಯಾರು ಜಮೀನು ಕಳೆದುಕೊಳ್ಳುತ್ತಾರೋ ಅವರಿಗೆ ಬೇರೆ ಜಮೀನು ಸಿಕ್ಕುತ್ತಿಲ್ಲ. ತುಂಗಭದ್ರ ಪ್ರಾಜೆಕ್ಟನ್ನು ತೆಗೆದುಕೊಂಡಾಗ ನೋಡಿದ್ದೇನೆ. ಸಹಸ್ರಾರು ಎಕರೆ ಭೂಮಿ ಮುಳುಗಡೆ ಆಗಿಹೋಗುತ್ತದೆ. ಆ ಮೇಲೆ ಆ ಬಾಬಿಗೆ ಬರತಕ್ಕ ವಿಚಾರ ಬೇರೆ ಮಾತು. ಯಾರು ಆ ಪ್ರದೇಶದಲ್ಲಿ ಇದ್ದು ಆಸ್ತಿಪಾಸ್ತಿ ಮಾಡಿಕೊಂಡಿರುತ್ತಾರೋ ಅವರ ಆಸ್ತಿಪಾಸ್ತಿ ಮುಳುಗಿನುವುದು ಒಂದು ಕ್ರಿಮಿನಲ್ ದೀಡ್ ಎಂದು ಕರೆಯಬೇಕಾಗುತ್ತದೆ. ಒಬ್ಬನು ಮನೆ ಮಾಡಿಕೊಂಡು ಇರುತ್ತಾನೆ. ಅವನ ಮನೆ ನುತ್ತಲೂ ನೀರು ತಂದು ಮುಳುಗಿನುವುದು ಎಂದರೆ ಅದು ಊಹಾತೀತ. ಅದನ್ನು ಮಾಡುತ್ತಿರುವಾಗ ಯಾವ ರೀತಿ ಪ್ರಾರಂಭವಾಗುತ್ತದೆ ಎಂದರೆ ಲ್ಯಾಂಡ್ ರೆವಿನ್ಯೂ ಡಿಪಾರ್ಟ್‌ಮೆಂಟಿನಿಂದ ಷುರುವಾಗಿ P.W.D.ಇಲಾಖೆಗೆ ವಹಿಸಲ್ಪಡುತ್ತದೆ. ಆಮೇಲೆ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನವರು ಬರುತ್ತಾರೆ. ಹೀಗೆ ಒಬ್ಬರಾದಮೇಲೊಬ್ಬರು ಆ ಜಾಗವನ್ನೆಲ್ಲಾ ಅಧೀನಮಾಡಿಕೊಂಡು ಅಲ್ಲಿ ವಾಸವಾಗಿದ್ದ ಜನರ ಆಸ್ತಿಪಾಸ್ತಿ ಮನೆಮಠಗಳ ಸ್ಥಿತಿಗತಿ ಏನಾಯಿತು ಎಂಬುದನ್ನು ಕೇಳುವವರೇ ಇಲ್ಲ. ಅವರನ್ನು ಸರ್ಕಾರದವರು ಮಾತನಾಡಿಸುವುದೇ ಇಲ್ಲ.

ಹೊನ್ನೆಮರಡು ಯೋಜನೆಗೆ ಸಂಬಂಧಪಟ್ಟಂತೆ ನಾನು ಮಾತನಾಡುತ್ತಿದ್ದೇನೆ: ಅದು ನನ್ನ ಕಾನ್ಸ್ಟಿಟ್ಯುಯೆನ್ಸಿಗೆ ಸೇರಿದ್ದು. ನಾನು ಈ ಸಂದರ್ಭದಲ್ಲಿ ಬಹಳ ಒತ್ತಾಯಪೂರ್ವಕವಾಗಿ ಹೇಳುತ್ತೇನೆ; ಈ ರೀತಿ ಜನತೆಗೆ ಸರಿಯಾದ ಪರಿಹಾರವನ್ನು ಒದಗಿಸದೇ ಇರುವುದು ಅನ್ಯಾಯಮಾಡಿದಂತಾಗುತ್ತದೆ; ಇದಕ್ಕೆ ಗಮನಕೊಡಬೇಕು. ಹೊನ್ನೆಮರೆಡು ಪ್ರಾಜೆಕ್ಟಿಗೆ 3-4 ಎಸ್ಟಿಮೇಟು ಕೇಂದ್ರ ಸರ್ಕಾರದ ಕಡೆಗೆ ಕಳುಹಿಸಿದ್ದೇವೆ; ಅದು ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ. ಅದು ಯಾವ ಸ್ವರೂಪವನ್ನು ತಾಳುತ್ತದೋ ಗೊತ್ತಿಲ್ಲ. ಈಗಾಗಲೇ ಅಲ್ಲಿರತಕ್ಕ ಜನರು ಪೂರಾ ಬೇಸರಗೊಂಡಿದ್ದಾರೆ ಒಟ್ಟಿನಲ್ಲಿ ಮಾಡುತ್ತೇವೆ ಅಂತಲೂ ಹೇಳುವುದಿಲ್ಲ, ಕೈಬಿಡುತ್ತೇವೆ ಅಂತಲೂ ಹೇಳುವುದಿಲ್ಲ. ಯಾವುದೂ ಖಚಿತವಾಗಿಲ್ಲ. ಅದನ್ನು ಸ್ಪಷ್ಟಪಡಿಸಬೇಕು; ಇಲ್ಲದೇಹೋದರೆ ಅಲ್ಲಿ ಬದುಕುಮಾಡತಕ್ಕ ಜನರು ಅನಿಶ್ಚಿತವಾದ ಪರಿಸ್ಥಿತಿಯಲ್ಲಿ ಕಾಲಕಳೆಯುವುದು ಬಹಳ ಕಷ್ಟವಾಗುತ್ತದೆ ಎಂದು ಮಾತ್ರ ಹೇಳುತ್ತೇನೆ.

*ಶ್ರೀ ಡಿ ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಸರ್ಕಾರದವರು ರೂರಲ್ ಎಲೆಕ್ಟ್ರಿಫಿಕೇಷನ್ನಿಗೆ ಎಂದು ಹೇಳಿ ಈ ವರ್ಷ 30 ಲಕ್ಷ ರೂಪಾಯಿಗಳನ್ನು—ಬಳ್ಳಾರಿಗೆ ಅಲ್ಲದೆ—ಒದಗಿಸಿದ್ದಾರೆ. ಬಳ್ಳಾರಿಗೆ transferred territory ಎಂದು ಹೇಳಿ 3 ಲಕ್ಷ ರೂಪಾಯಿ ಒದಗಿಸಿದ್ದಾರೆ. ಈ ರೀತಿ ಹಿಂದಿನ ವರ್ಷದಲ್ಲೂ ಕೂಡ ಹೆಚ್ಚು ಕಡಮೆ ಇದೇ ಮಟ್ಟದಲ್ಲಿ ಹಳ್ಳಿಗಳಿಗೆ ಮತ್ತು ಟ್ಯಾಕ್ಟಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಹಣವನ್ನು ಬಡ್ಜೆಟಿನಲ್ಲಿ ಒದಗಿಸುತ್ತಾ ಬಂದಿದ್ದಾರೆ. ಸ್ವಾಮಿ, ತಮಗೆ ಗೊತ್ತಿರುವ ಹಾಗೆ ಎಲ್ಲಾ ಜಿಲ್ಲೆಗಳ ಜನರೂ ಹೆಚ್ಚುಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಕೇಳುತ್ತಿರುವ ಕಾಲ ಇದು. ನಮ್ಮ ದೇಶದಲ್ಲಿ ಯಾವ ಕಾರ್ಯ ಅಭಿವೃದ್ಧಿಯಾಗಬೇಕಾದರೂ ಅದು ಇಲ್ಲದೆ ಸಾಧ್ಯವಿಲ್ಲ. ಅದರಲ್ಲೂ ರೈತರು ಈಗ ತಮ್ಮ ವ್ಯವಸಾಯವನ್ನು ಮುಂದುವರಿಸಬೇಕಾದರೆ ಈ ವಿದ್ಯುಚ್ಛಕ್ತಿಯ ಸಹಾಯದಿಂದ ಬಾವಿಗಳಿಗೆ ಪಂಪುಗಳನ್ನು ಹಾಕಿ ನೀರನ್ನು ಮೇಲಕ್ಕೆತ್ತಿ ವ್ಯವಸಾಯ ಮಾಡಬೇಕಾಗಿದೆ. ಇದಕ್ಕಾಗಿ ವಿದ್ಯುಚ್ಛಕ್ತಿ ಬೇಕೆಂದು ಹೇಳಿ ಎಲ್ಲಾ ಕಡೆಯಿಂದಲೂ ಕೂಗು ಬರುತ್ತಾ ಇದೆ. ನಾನು ಹಿಂದೆ ಒಂದು ಸಾರಿ ಈ ಮಾತನ್ನು ಹೇಳಿದ್ದೆ ಅದನ್ನು ಈ ಸಂದರ್ಭದಲ್ಲಿ ಪುನಃ ಹೇಳಬೇಕೆಂದು ಇಚ್ಛೆ ಪಡುತ್ತೇನೆ. ರಷ್ಯಾ ದೇಶದಲ್ಲಿ ರೆವಲ್ಯೂಷ್ ನಡೆಯುತ್ತಾ ಇದ್ದಾಗಲೂ.....

Mr. SPEAKER.—I think that is the only taluk headquarter in Mysore State.

Dr. R. NAGAN GOWDA (Minister for Agriculture).—There are quite a few places in Bellary, Sir.

ಶ್ರೀ ಡಿ. ದೇವರಾಜ ಅರಸ್.—ಮೈಸೂರು ಸಂಸ್ಥಾನದಲ್ಲಿ ಎಲ್ಲಾ ತಾಲ್ಲೂಕುಗಳಿಗೂ ವಿದ್ಯುಚ್ಛಕ್ತಿ ಒದಗಿಸಿದ್ದೀರಿ. ಆದರೆ ಪಿರಿಯಾಪಟ್ಟಣ ತಾಲ್ಲೂಕಿಗೆ ಮಾತ್ರ ಒದಗಿಸಿಲ್ಲ. ಶ್ರೀಮಾನ್ ಕೆ. ಟಿ. ಭಾಷ್ಯಂರವರು ಎಲೆಕ್ಟ್ರಿಸಿಟಿ ಪೋರ್ಟ್‌ಪೋಲಿಯೋನಲ್ಲಿದ್ದಾಗಲೂ ಕೂಡ ಎಲ್ಲಾ ಕಡೆಗಳಿಗೂ ವಿದ್ಯುಚ್ಛಕ್ತಿ ಒದಗಿಸುತ್ತೇವೆ ಎಂದು ಹೇಳಿದ್ದರು. ಆಗ ನಮ್ಮ ತಾಲ್ಲೂಕಿಗೆ ಬರುತ್ತದೆ ಎಂದು ಹೇಳಿ ನಂಬಿಕೊಂಡಿದ್ದೆವು. ನಾಲ್ಕು ವರ್ಷಗಳಿಂದ ನತತವಾಗಿ ಹೇಳಿಕೊಂಡು ಬರುತ್ತಾ ಇದ್ದರೂ ಸಹ ಇದುವರೆಗೂ ಒದಗಿಸಿಲ್ಲ. ಬಹುಶಃ ಮುಂದಿನ ಅಧಿವೇಶನದಲ್ಲೂ ಕೂಡ ಇದೇ ರೀತಿ ಒದಗಿಸುತ್ತೇವೆ ಎಂದು ಹೇಳುತ್ತಾರೋ ಏನೋ ಎಂದು ಗಾಬರಿಯಾಗಿ ಇಷ್ಟು ಸೀರಿಯಸ್ ಆಗಿ ಹೇಳಬೇಕಾಗಿ ಬಂತು. ಆದ್ದರಿಂದ ಅಲ್ಲಿಗೆ ಕೂಡಲೇ ವಿದ್ಯುಚ್ಛಕ್ತಿ ಒದಗಿಸಲು ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಬಿ. ಎಲ್. ನುಬ್ಬಮ್ಮ (ಚಿಕ್ಕಮಗಳೂರು—ಮೂಡಿಗೆರೆ).—ಸ್ವಾಮಿ, ವಿದ್ಯುಚ್ಛಕ್ತಿ ಒದಗಿಸುವ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಹೇಳಬೇಕೆಂದು ಇದ್ದೇನೆ. ವಿದ್ಯುಚ್ಛಕ್ತಿ ಒದಗಿಸಬೇಕಾದರೆ ರಿಟರ್ನ್

ಜಾಸ್ತಿ ಬಂದರೆ ಮಾತ್ರ ಕೊಡಬೇಕೆಂಬ ಅಭಿಪ್ರಾಯ ಇದೆ. ವಿದ್ಯುಚ್ಛಕ್ತಿ ತಯಾರಾಗುವುದು ಮಲೆನಾಡಿನಲ್ಲಿ. ಹಾಗಿರುವಾಗ ರಿಟರ್ನ್ ಬರುತ್ತದೆಯೋ ಇಲ್ಲವೇ ಎಂಬುದೊಂದನ್ನೇ ನೋಡಿಕೊಂಡು ಮಲೆನಾಡನ್ನು ನಿಕೃಷ್ಟವಾಗಿ ಕಾಣಬಾರದು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನೇಕ ಹಳ್ಳಿಗಳವರು ಸಂಬಂಧಪಟ್ಟ ಮಂತ್ರಿಗಳವರಿಗೆ ಅರ್ಜಿಗಳನ್ನು ಕೊಟ್ಟಿದ್ದಾರೆ; ಅವರಿಗೆ ಇನ್ನೂ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ಆದ್ದರಿಂದ ಈ ವರ್ಷವಾದರೂ ವಿದ್ಯುಚ್ಛಕ್ತಿ ಆ ಪ್ರದೇಶಗಳವರಿಗೆ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಚಿಕ್ಕಮಗಳೂರು ಜಿಲ್ಲೆಯ, ಸಕ್ರಾಯಪಟ್ಟಣ, ಹೊಗಲೇರಿ ಹಳ್ಳಿ, ಕಳಸ, ಸಂಗಮೇಶ್ವರಪೇಟೆ, ಕಳಸಾಪುರ, ಹೊಸಳ್ಳಿ ಪೇಟೆಯವರು ಸುಮಾರು ಹತ್ತು ವರ್ಷಗಳಿಂದ ಕೇಳುತ್ತಿದ್ದರೂ ಕೊಡದಿರುವುದು ಸರಿಯಲ್ಲ. ಮಲೆನಾಡು ಅಭಿವೃದ್ಧಿ ಆಗಬೇಕಾದರೆ ವಿದ್ಯುಚ್ಛಕ್ತಿಯನ್ನು ಮೂಲೆಮೂಲೆಗಳಿಗೂ ಒದಗಿಸಬೇಕೆಂದು ಕೇಳುತ್ತೇನೆ.

*ಶ್ರೀ ಜಿ. ಬಸಪ್ಪ (ಹೊಸದುರ್ಗ).—ಸ್ವಾಮಿ, ಮಾನ್ಯ ಸದಸ್ಯರು ಇದುವರೆಗೂ ಮಾತನಾಡಿದ್ದನ್ನು ನೋಡಿದರೆ ಸರ್ಕಾರದಮೇಲೆ ವಿದ್ಯುಚ್ಛಕ್ತಿ ಸರಬರಾಜಿಗಾಗಿ ಎಷ್ಟು ಮಟ್ಟಿನ ಒತ್ತಾಯ ಇದೆ ಎಂಬುದು ಮನಗಾಣುತ್ತಾ ಇದೆ. ಆದರೆ ಶ್ರೀಮಾನ್ ಮ್ಯಾನ್ಯರ್ಕೆ ಹ್ಯಾಸ್‌ರವರು ಹೇಳಿದ ಹಾಗೆ ವಿದ್ಯುಚ್ಛಕ್ತಿ ತಯಾರಾದ ಡ್ಡೆಲ್ಲಾ ಒಂದೆರಡು ವರ್ಷಗಳಲ್ಲಿ ಎಲ್ಲ ಹೊರಗೆ ಹೊರಟು ಹೋಗುತ್ತದೆಯೋ ಎಂಬ ಭಯ ನಮಗೆ ಉಂಟಾಗಿದೆ. ಇಂಥ ಕಾಲದಲ್ಲಿ ಸರ್ಕಾರದವರು ಮೊದಲು ನಮ್ಮ ದೇಶದವರಿಗೆ ಒದಗಿಸಿ ಆಮೇಲೆ ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ ಈ ಪ್ರದೇಶಗಳಿಗೆಲ್ಲಾ ಒದಗಿಸುವುದು ಸೂಕ್ತವಾಗಿದೆ. ಅಷ್ಟೇ ಅಲ್ಲದೆ ನಮ್ಮಲ್ಲಿ ಉತ್ಪನ್ನವಾದ ವಿದ್ಯುಚ್ಛಕ್ತಿ ಎಲ್ಲ ಪ್ರದೇಶಗಳಿಗೂ ಒದಗಿಸಲಿಕ್ಕೆ ಸಾಗಾಗದೆ ಹೋಗಬಹುದೆಂಬ ಒಂದು ಅಭಿಪ್ರಾಯವಿದೆ. ಆದ್ದರಿಂದ ಕೇಂದ್ರ ಸರ್ಕಾರದವರೊಡನೆ ಆದಷ್ಟು ಜಾಗ್ರತೆ ವ್ಯವಹಾರ ನಡೆಯಿಸಿ ವಿದ್ಯುಚ್ಛಕ್ತಿ ಉತ್ಪನ್ನ ಮಾಡಲಿಕ್ಕೆ ಬೇರೆ ಯಾವುದಾದರೂ ಒಂದು ಯೋಜನೆ ತೆಗೆದುಕೊಂಡು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರದಿಂದ ಹಣ ಸಹಾಯ ದೊರೆಯದೇ ಇದ್ದರೆ ಇದಕ್ಕಾಗಿಯೇ ಒಂದು ಪ್ರತ್ಯೇಕವಾಗಿ loan float ಮಾಡಿಯಾದರೂ ಕೂಡ ಅದನ್ನು ಜಾಗ್ರತೆ ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ನೆಲಮಂಗಲ, ಮಾಗಡಿ, ದೊಡ್ಡಬಳ್ಳಾಪುರ ಈ ತಾಲ್ಲೂಕುಗಳಲ್ಲಿ ಯಾವಾಗಲೂ ಮಳೆ ಬಹಳ ಕಡಮೆ. ಆದ್ದರಿಂದ ಇಲ್ಲಿ ಇರಿಗೇಷನ್ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನು ವಿಶೇಷವಾಗಿ ಕೇಳುತ್ತಾ ಇದ್ದೇವೆ. ಅಲ್ಲದೇ ನೆಲಮಂಗಲ ತಾಲ್ಲೂಕಿನ ಮಾಣ್ಣೆ, ಓಬಳಾಪುರ, ನಿಡುವಂದ, ಮುರಳಕಾಲವೆ ಈ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಅನೇಕ ಸಲ ತಮ್ಮಲ್ಲಿ ಮನವಿ ಮಾಡಿ ಕೊಂಡಿದ್ದಾರೆ. ಆ ಗ್ರಾಮಗಳಿಗೆ ಈ ವರ್ಷವೇ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ॥ ಆರ್. ನಾಗನಗೌಡ.—ವಿದ್ಯುಚ್ಛಕ್ತಿ, ಎಷ್ಟು ತೀವ್ರವಾಗಿ ಬೇಕಾಗಿದೆ ಎಂಬುದು ಇವೊತ್ತಿನ ದಿವಸ ಈ ಖೋತಾ ನಿರ್ಣಯಗಳ ಅಥವಾ ಡಿಮ್ಯಾಂಡಿನ ಮೇಲೆ ಆಗಿರತಕ್ಕ ಭಾಷಣಗಳಿಂದ ಗೊತ್ತಾಗುತ್ತದೆ. ವಿದ್ಯುಚ್ಛಕ್ತಿ ಕೊಡಿ, ಆದರೆ ರಿಟರ್ನ್ ಬರುವುದು ಮಾತ್ರ ಯೋಚನೆ ಮಾಡಬೇಡಿ ಎಂದು ಎಲ್ಲರೂ ಹೇಳುತ್ತಾರೆ. ಶ್ರೀಮತಿ ಬಿ. ಎಲ್. ಸುಬ್ಬಮ್ಮನವರೂ ಸಹ ಅದೇ ವಿಚಾರವನ್ನು ಹೇಳಿದರು. ಶ್ರೀಮಾನ್ ಮ್ಯಾನ್ಯರ್ಕೆ ಹ್ಯಾಸ್ ಮತ್ತು ಬಸಪ್ಪನವರು ಹೇಳಿದ ಹಾಗೆ, ಇಲ್ಲಿ ಉತ್ಪನ್ನವಾಗತಕ್ಕ ವಿದ್ಯುಚ್ಛಕ್ತಿಯನ್ನು ಇಲ್ಲೇ ಹೆಚ್ಚಾಗಿ ಬಳಸಬೇಕೆಂಬ ಅಭಿಪ್ರಾಯವಿದೆ. ವಿದ್ಯುಚ್ಛಕ್ತಿ, ಉತ್ಪನ್ನವಾಗತಕ್ಕದ್ದು ಸಾಲದೇ ಹೋದರೆ ಹೊಸ ಯೋಜನೆ ತೆಗೆದುಕೊಳ್ಳಿ, ಅದಕ್ಕೆ ದುಡ್ಡು ಬೇಕು, ದುಡ್ಡು ಬೇಕಾದರೆ ಸಾಲ ತೆಗೆದುಕೊಂಡು ಬನ್ನಿ ಎಂದು ಶ್ರೀಮಾನ್ ಬಸಪ್ಪನವರು ಹೇಳಿದರು. ಹಾಗೆ ಮಾಡಬೇಕಾದರೂ ಸಾಲ ಕೊಟ್ಟವರು ಮತ್ತೆ ಬಡ್ಡಿ ಸಹ ಕೇಳುವ ಸಂಪ್ರದಾಯ ಇದೆ ಎಂಬುದನ್ನು ಹೇಳುತ್ತಿದ್ದೇನೆ. ಶಿಂಷಾ ಪ್ರಾಜೆಕ್ಟು ಶ್ರೀಮಾನ್ ಮ್ಯಾನ್ಯರ್ಕೆಹ್ಯಾಸ್‌ರವರು ಹೇಳಿದ ಹಾಗೆ ಬಹಳ ಶ್ರೇಷ್ಠವಾಗಿ ಕ್ಕೆಕೊಳ್ಳುತ್ತೇವೆ. ಅಲ್ಲಿಗೆ 11,000 ಚಿಲ್ಲರೆ ಕಿಲೋವಾಟ್ ಕರೆಂಟು ಹೆಚ್ಚಾಗುತ್ತದೆ. ಇನ್ನು ಹೊನ್ನೆಮರಡು ಪ್ರಾಜೆಕ್ಟಿನ ವಿಷಯ ಏನು ಮಾಡುತ್ತ ಇದ್ದೀರಿ ಎಂದು ನಮ್ಮ ಕಾಮ್ರೇಡ್ ಗೋಪಾಲಗೌಡರು ಕೇಳಿದರು. ಬಹಳ ಶೀಘ್ರವಾಗಿ ತೀರ್ಮಾನಮಾಡಬೇಕೆಂದು ಹೇಳಿದ್ದಾರೆ. ಈ ಹೊನ್ನೆಮರಡು ಎಂಬುದು ಬಹಳ ದೊಡ್ಡ ಪ್ರಾಜೆಕ್ಟು. 38-40 ಕೋಟಿ ರೂಪಾಯಿಗಳ ಪ್ರಾಜೆಕ್ಟು. ಅದನ್ನು ಎಲ್ಲ ಯಾವ ರೀತಿ ಮಾಡಬೇಕೆಂಬುದನ್ನು ಸ್ವಲ್ಪ ತೀಕ್ಷ್ಣವಾಗಿ ಮತ್ತು ಸಂಪೂರ್ಣವಾಗಿ ಪರಿಶೀಲನೆ ಮಾಡಿದರೆ ಒಂದು ತೀರ್ಮಾನಕ್ಕೆ ಬರಬಹುದೇ ಹೊರತು ಇಲ್ಲದೇ ಇದ್ದರೆ ಬಹಳ ಕಷ್ಟ. ನಿಜ, ಅವರು ಬಹಳ ಚಿಕ್ಕ ವಯಸ್ಸಿನವರು, ಅವರಿಗೆ ಗೊತ್ತಿಲ್ಲದೇ ಇರಬಹುದು; 1904ರಲ್ಲಿ ತುಂಗಭದ್ರಾ ಪ್ರಾಜೆಕ್ಟಿನ ಆಲೋಚನೆ ಪ್ರಾರಂಭವಾದದ್ದು. 1954ರಲ್ಲಿ ಇನ್ನೂ ಅದು complete ಆಗಿಲ್ಲ. ಚಿಕ್ಕ ವಯಸ್ಸಿನವರಿಗೆ wait ಮಾಡುವುದು ಕಷ್ಟವಾದ ಕೆಲಸ.

ಶ್ರೀ ಎಸ್. ಗೋಪಾಲಗೌಡ.—ಈ remark ಸರಿಯೇ, ಸ್ವಾಮಿ ?

Dr. R. NAGAN GOWDA.—I was giving him a compliment for his young age. He has experience and knowledge, I agree. But he does not yet know how to wait. ಅದನ್ನು ಬಹಳ ಶೀಘ್ರವಾಗಿ ತೆಗೆದುಕೊಳ್ಳಬೇಕೆಂದು ಇದ್ದೇವೆ. ಹೊನ್ನೆಮರಡು ಮತ್ತು ಇನ್ನೂ ಎರಡು ಮೂರು ಇವೆ. ಅವೆಲ್ಲವೂ ಪರ್ಯಾಲೋಚನೆಯಲ್ಲವೆ. ಹೊನ್ನೆಮರಡು ಪ್ರಾಜೆಕ್ಟನ್ನು ನಾವು ಬಹಳ ಶೀಘ್ರವಾಗಿ ತೆಗೆದು ಕೊಳ್ಳಬೇಕೆಂದಿದ್ದೇವೆ. ಅದನ್ನೂ ಮತ್ತು ಮಾನ್ಯ ಸದಸ್ಯರು ಹೇಳಿರುವುದನ್ನೂ ಪರಿಶೀಲನೆ ಮಾಡಿದೆ.

ಇನ್ನೊಂದು ಬಹಳ ದೊಡ್ಡ ಪ್ರಶ್ನೆ ಮುಳುಗಿ ಹೋಗುವ ಗ್ರಾಮಗಳ ವಿಷಯ. ಈ ವಿಚಾರದಲ್ಲಿ ನನಗೆ ಅನುಭವ ಬಹಳವಾಗಿದೆ. ತುಂಗಭದ್ರಾ ಪ್ರಾಜೆಕ್ಟಿನಲ್ಲಿ ಈ ಅನುಭವ ಬಂದಿದೆ. ಹಾಗೆ ಮುಳುಗುವ ಗ್ರಾಮಗಳಿಗೆ ಸರಿಯಾದ ಏರ್ಪಾಡು ಮಾಡುತ್ತೇವೆ. ಇಷ್ಟು ಸಮಜಾಯಿಷಿಯಮೇಲೆ ಎಲ್ಲರೂ ಈ ಡಿಮ್ಯಾಂಡಿಗೆ ಬೆಂಬಲ ನೀಡುತ್ತಾರೆಂದು ನಂಬಿದ್ದೇನೆ.

Mr. SPEAKER.—The question is:

"That a sum not exceeding Rs. 2,40,07,000 be granted to the Government to defray the charges

(MR. SPEAKER.)

which will come in course of payment during the year ending 31st day of March 1955, in respect of 'Capital Outlay on Electricity Schemes'."

The motion was adopted.

Mr. SPEAKER.—The House will now rise for lunch and meet at 3-30.

The House adjourned for Lunch at Three Minutes past Three of the Clock and reassembled at Thirty Minutes past Three of the Clock.

[MR. SPEAKER in the Chair]

DEMAND No. 44—SCHEMES CONNECTED WITH STATE SCHEMES OF GOVERNMENT TRADING

85-A. CAPITAL OUTLAY ON STATE SCHEMES OF GOVERNMENT TRADING.

Mr. SPEAKER.—Motion moved:

"That a sum not exceeding Rs. 5,51,00,000 be granted to the Government to defray the charges which will come in course of payment during the year ending 31st day of March 1955, in respect of 'Capital Outlay on Schemes of State Trading'."

Sri P. R. RAMAIYA (Basavangudi).—Sir, the other day I referred to the question of thrown out employees from the Food Department. There was no time for reply by the Minister. I would like to know what the Government are going to do with them.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಈ ಡಿಮ್ಯಾಂಡಿಗೆ ಸಂಬಂಧಪಟ್ಟ ಹಾಗೆ ಆಹಾರ ಇಲಾಖೆಯಲ್ಲಿ ನಡೆದಿರತಕ್ಕಂಥ ವ್ಯಾಪಾರದಲ್ಲಿ ಬಹಳವಾಗಿ ಹಣ ಲುಕ್ಸಾನಾಗಿದೆಯೆಂಬುದು ಮುಖ್ಯವಾದ ವಿಷಯ. ಹೊರಗಡೆಯಿಂದ ಸಂಸ್ಥಾನಕ್ಕೆ ರಾಗಿ, ಜೋಳ, ಗೋಧಿ ಮತ್ತು ಇತರ ಧಾನ್ಯಗಳನ್ನು ತರಿಸಿರುವ ಸಂದರ್ಭಗಳಲ್ಲಿ ದರಗಳನ್ನು ನಾವು ನೋಡಿದ್ದರಲ್ಲಿ ಕೆಲವು ಸಂಸ್ಥಾನಗಳಲ್ಲಿ ಸರ್ಕಾರ ಒಂದು ದರವನ್ನು ಗೊತ್ತುಮಾಡಿರುವುದುಂಟು. ಕೆಲವು ಕಡೆ ಫ್ರೀ ಮಾರ್ಕೆಟ್ ರೇಟ್ ಎಂದಿದ್ದುದೂ ಉಂಟು. ಇಲಾಖೆ ನಡೆಯುತ್ತಿರುವಾಗ ಕೆಲವು ಸಂದರ್ಭಗಳಲ್ಲಿ ಸರ್ಕಾರ ಹೆಚ್ಚು ಹಣವನ್ನು ಕೊಟ್ಟು ತಂದಿರುವ ಸಂದರ್ಭಗಳೂ ಕಾಣಬರುತ್ತವೆ. ಉದಾಹರಣೆಗೆ ಇತ್ತೀಚೆಗೆ ಕಟಕ್ನಿಂದ ರಾಗಿ ತರಿಸಿದ ಸಂದರ್ಭ ಹೇಳಬಹುದು. ಅಲ್ಲಿ ಆಗಿನ ಕೋಡೆಡ್ ಮಾರ್ಕೆಟ್ ದರಕ್ಕೂ ಸರ್ಕಾರ ಕೊಂಡ ಖರೀದಿಗೂ ಸುಮಾರು ನಾಲ್ಕು ರೂಪಾಯಿಗಳ ವ್ಯತ್ಯಾಸವಿರುತ್ತದೆ. ಇದೇ ರೀತಿ ಚೀಲಗಳ ಹ್ಯಾಂಡ್ಲಿಂಗ್ ಛಾರ್ಜಸ್ ನೋಡಿದರೆ ಅಲ್ಲಿ ಟ್ಟ ಲೆಕ್ಕದಲ್ಲಿ ತಂದು ಇಲ್ಲಿ ಮಾರುವಾಗ ಪಲ್ಲಾ ಲೆಕ್ಕದಲ್ಲಿ ಕೊಟ್ಟಿದ್ದಾರೆ. ಆಗಲೂ ಕೂಡ ಅಳತೆಯಲ್ಲಿ ಹೆಚ್ಚಾಗಿ ಬಂದಿರುವ ಹಾಗೆ ಕಂಡು ಬಂದಿಲ್ಲ. ಅದಕ್ಕೆ ಮಾರ್ಜಿನ್ ಬಿಡಬೇಕೆಂಬ ನಿಯಮವಿದ್ದರೂ ಕೂಡ ಅನೇಕ ವೇಳೆ ಹೆಚ್ಚಾಗಿ ಬೇಳೆಗಳನ್ನು ತರಿಸುವಾಗ ನೂರಾರು ಪಲ್ಲಾಗಳಷ್ಟು ಕಡಮೆ ಬರುವ ಸಂಭವವಿದೆ. ಇದನ್ನು ಸರ್ಕಾರದವರು ಈಗಲೂ ಪರಿಶೀಲಿಸುವುದಕ್ಕೆ ಅವಕಾಶವಿದೆ.

ಇನ್ನು ಈಗಿರತಕ್ಕಂಥ ದಾಸ್ತಾನು ನೋಡಿದರೆ ಸರ್ಕಾರದಲ್ಲಿ ಬಹಳ ಹಿಂದಿನಿಂದ ಅಕ್ಯೂಮುಲೇಟ್ ಆಗಿ ಬಂದಿರುವ ಜೋಳ ಈಗಲೂ ಹಾಗೆಯೇ ಉಳಿದಿದೆ. ಕೆಲವು ಕಡೆ ನೀಡಿರುವಂತೆ ಈ ಜೋಳ ವ್ಯಾಪಾರವಾಗುವುದಕ್ಕೆ ಲಾಯಕ್ಕಿಲ್ಲ, ಯಾರೂ ಅದನ್ನು ಕೊಂಡುಕೊಳ್ಳಲಾರರು. ಇಂಥ ಅಕ್ಕಿ ಕೂಡ ಇದೆ. ಇಂಥಾದ್ದು ಒಂದೆರಡು ಚೀಲಗಳಿದ್ದರೆ ಚಿಂತೆಯಿರಲಿಲ್ಲ. ಅದು ಸಾಧಾರಣವಾಗಿ ನೂರಾರು ಚೀಲಗಳ ಸಂಖ್ಯೆಯಲ್ಲಿದೆ. ಆದ್ದರಿಂದ ಸರ್ಕಾರದವರು ಇತ್ತೀಚೆಗೆ ಸ್ವಲ್ಪ ದರದಲ್ಲಿ ಒಂದು ಇಳುವರಿಯನ್ನು ತೋರಿಸಿ ಇಂತಹ ದಾಸ್ತಾನು ಖರ್ಚಾಗಲೆಂದು ಉದ್ದೇಶ ಮಾಡಿದ್ದರೂ ಕೂಡ ಇನ್ನೂ ಈ ದಾಸ್ತಾನು ಖರ್ಚಾಗುತ್ತಿಲ್ಲ. ಹೀಗೆ ಈ ವ್ಯವಹಾರದಲ್ಲಿ ಸರ್ಕಾರಕ್ಕೆ ಹೆಚ್ಚಾದ ಒಂದು ನಷ್ಟವಾಗಿದೆ. ಈ ಲುಕ್ಸಾನನ್ನು, ನಷ್ಟದ ಬಾಬುಗಳನ್ನು ಈಗಲಾದರೂ ನಾವು ನಿರಪಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಈಗಲೂ ಗೋಡೌನ್ಗಳಲ್ಲಿ ಸರಿಯಾದ ವ್ಯವಸ್ಥೆಯಿಲ್ಲದಿರುವುದು, ಸರಿಯಾದ ಲೆಕ್ಕಪತ್ರವಿಲ್ಲದಿರುವುದು, ದರ ಸರಿಯಾದ್ದನ್ನು ತಗೆಮುಕೊಳ್ಳದಿರುವುದು ಇತ್ಯಾದಿಯಾಗಿರುವ ಕೆಲವು ವಿಷಯಗಳನ್ನು ಸರ್ಕಾರದವರು ಗಮನಿಸಬೇಕು. ಒಟ್ಟಿನಲ್ಲಿ ಈಗಿರುವ ಲುಕ್ಸಾನನ್ನು ನೀವು ಈ ದಿವಸ ತಡೆಗಟ್ಟಲು ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕು, ಇಲ್ಲದಿದ್ದರೆ ತುಂಬಾ ಕಷ್ಟ ಎಂದು ಹೇಳಿ ಈ ಡಿಮ್ಯಾಂಡ್ ಮನವಿಯನ್ನು ವಿರೋಧಿಸುತ್ತೇನೆ.

ಶ್ರೀ ಜಿ. ಬಸಪ್ಪ (ಹೊನಾವರ್ಗ).—ಸ್ವಾಮಿ, ಈ ಡಿಮ್ಯಾಂಡ್ ಮನವಿಯ ಬಗ್ಗೆ ಮಾತನಾಡುತ್ತಾ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಆಹಾರದ ಇಲಾಖೆ ವಿಷಯದಲ್ಲಿ ನಮ್ಮ ಜಿಲ್ಲೆಯಲ್ಲಿ ಪೊನ್ನೆ ಡೆಪ್ಯುಟಿ ಕಮಿಷನರು ಈ ತಿಂಗಳಲ್ಲಿ 50 ಪಲ್ಲಾಗಳಷ್ಟು ಕೂಡ ಆಫ್ಟೇಕ್ ಇಲ್ಲವೆಂದು ಹೇಳಿದರು. ಇಂಥ ಒಂದು ಪರಿಸ್ಥಿತಿಯಲ್ಲಿ ಹಿಂದೆ ಯಾವ ಸಿಬ್ಬಂದಿಯಿತ್ತೋ ಅದೇ ಸಿಬ್ಬಂದಿಯನ್ನಿಟ್ಟು ಅವರಿಗೆ ವ್ಯಥಾ ಸಂಬಳ ಕೊಡುವುದು ತುಂಬ ಅನ್ಯಾಯ. ರಿನವ್ಡ್ ಗೋಡೌನುಗಳಲ್ಲಿ, ಡಿಪೋಗಳಲ್ಲಿ ಹಿಂದಿದ್ದ ಸಿಬ್ಬಂದಿಯನ್ನು, ಪೆಷರ್ನ್ಸ್ನ್ನು ಈಗಲೂ ಕೂಡ ಮುಂದುವರಿಸುತ್ತಿದ್ದಾರೆ; ಯಾವ ಕೆಲಸವೂ ಇಲ್ಲದೆ ಅವರಿಗೆ ವ್ಯಥಾ ಸಂಬಳ ಕೊಡುವ ಪರಿಸ್ಥಿತಿಯಿದೆ. ಇತ್ತೀಚೆಗೆ ಕೆಲವು ರಿಜರ್ವ್ ಡಿಪೋಗಳಲ್ಲಿ ಗೋಧಿ ಮುಂತಾದ ವನ್ನುಗಳನ್ನು ಯಾರಾದರೂ ಕೇಳಿದರೆ ಡಿಪೋದವರು ಹೇಳಿದ್ದನ್ನು ತೆಗೆದುಕೊಳ್ಳುವುದಾದರೆ ಮಾತ್ರ ಹಾಗೆ ಕೇಳುವುದನ್ನು ಕೊಡಿ ಎಂದು ಹೇಳುತ್ತಿರುವ ಸಂದರ್ಭ ನಮ್ಮ ಗಮನಕ್ಕೆ ಬಂದಿದೆ. ಒಂದು ಸೊಸೈಟಿಯಲ್ಲಿ ಗೋಧಿ ಕೇಳಿ

ದರೆ ಅದರ ಜೊತೆಯಲ್ಲಿ ಗೋಧಿಹಿಟ್ಟು ತೆಗೆದುಕೊಂಡರೆ ಕೊಡುತ್ತೇವೆ ಎಂದು ಹೇಳಿರುವುದು ಗೊತ್ತಾಗಿದೆ. ಹೀಗೆ ಹೇಳಿದರೆ, ಕೇಳಿದ ವನ್ನು ವಿನೊಡನೆ ಬೇಡದಿರುವುದನ್ನೂ ತೆಗೆದುಕೊಂಡು ಹೋಗಬೇಕೆಂದು ನಿರ್ಬಂಧ ಮಾಡಿದರೆ ಜನರಿಗೆ ಅನಾನುಕೂಲವಾಗುತ್ತದೆಂದು ತಿಳಿಸುತ್ತೇನೆ.

ಷಾರ್ಟೇಜ್ ವಿಚಾರದಲ್ಲಿ ಸರ್ಕಾರದವರು ಹಿಂದೆ ಪ್ರಶ್ನೆಗೆ ಉತ್ತರ ಕೊಡುವಾಗ ಇದಕ್ಕೆ ಒಂದು ಮಾರ್ಜಿನ್ ಇದೆ, ಅದಕ್ಕಿಂತ ಹೆಚ್ಚಿಗೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದರು; ಹೆಚ್ಚಿಗೆ ಖೋತಾ ಬಂದರೆ ಎಲ್ಲಿಂದ ಬಂತು ಎಂಬುದನ್ನು ನೋಡಿ ಸಂಬಂಧಪಟ್ಟವರಿಂದ ಕ್ಲೈಂ ಮಾಡುತ್ತೇವೆ ಎಂದು ಸಹ ಹೇಳಿದರು. ಈ ದಿವಸ ಕೂಡ ಕೆಲವು ಚೀಲಗಳಲ್ಲಿ 3—4 ಸೇರು ಕಡಮೆ ಬಂದರೂ ರಿನರ್ಪ್ ಡಿಪೋಗಳವರು ಸೊಸೈಟಿಗಳಿಗೆ ಹಂಚುವಾಗ ಆ ರೀತಿ ಕಡಮೆಯಿರುವುದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. 90 ಸೇರಿನ ಚೀಲ ಎಂದು ಲೆಕ್ಕವಿದ್ದರೆ ಅದನ್ನು ಹಾಗೆಯೇ ತೆಗೆದುಕೊಂಡು ಹೋಗಿ ಎಂದು ಹೇಳಿ ಬಿಡುತ್ತಾರೆ, ಅಳತೆ ಮಾಡುವುದಿಲ್ಲ. ಹೀಗಿರುವಾಗ ಇದಕ್ಕೆ ನೌಕರರು ಕಾರಣರೇ ಅಥವಾ ಹೊರಗಿನಿಂದ ಬರುವಾಗಲೇ ಕಡಮೆ ಬರುತ್ತದೆಯೇ ಎಂಬುದು ವಿಶದವಾಗಿಲ್ಲ. ಕೆಲವು ಸಂದರ್ಭಗಳಲ್ಲಿ ನೌಕರರು ಕೆಲವರು ಚೀಲಗಳಿಂದ ದವಸ ತೆಗೆದು ಕಡಮೆ ಬರುವುದಕ್ಕೆ ಕಾರಣರಾಗಿದ್ದಾರೆಂದು ದೂರು ಬಂದಿದೆ. ಇದೆಷ್ಟು ಮಟ್ಟಿಗೆ ನಿಜವೆಂಬುದನ್ನು ಪರಿಶೀಲಿಸಬೇಕು. ಈ ದೃಷ್ಟಿಯಿಂದ ಈ ಇಲಾಖೆಯಲ್ಲಿ ಹೆಚ್ಚು ಹಣ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಇದನ್ನು ಆದಷ್ಟು ಜಾಗ್ರತೆ ತಡೆಗಟ್ಟುವುದಕ್ಕೆ ಗಮನ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri S. SRINIVASA IYENGAR (T.-Narasipur).—Sir, I oppose the Demand. Government are holding large stocks of grain in various godowns. They will be retrenching many of the employees of the Food Department, but at the same time they are holding large stock of grains. If they delay in disposing their stock of grains, they are liable to lose a lot of money.

As regards retrenchment the Government are having in their mind, in the Food Department most of the temporary staff will go out of service on 30th March 1954, *i.e.*, tomorrow or the day after. When the Bangalore Cantonment area was transferred to the Mysore State, there was a Government Order to the effect that all those people in the Food Department must be taken to Mysore Government service. And there was also another Order to the effect that such of those who had a permanent lien should be reverted to the original posts and such of those who were temporary should be discharged. In spite of that the Government of Mysore have not absorbed all of them in permanent places. The temporary staff of the Food Department in Mysore State has not been shown the same consideration. The day after tomorrow they are to retrench hundreds of people and they will be thrown out of employment and Government do not hold any guarantee to reabsorb them. It is true that there is a Government Order to the effect that in all vacancies that may arise hereafter these retrenched men should be preferred. But in most of the unit offices, there are already lists dating from 1950-51 and 1951-52 and persons named therein are still unemployed. Therefore I want to know whether these retrenched people can ever get a chance for another ten years to come. In Madras and other places those employed temporarily were given bonus and allowances. But in Mysore, if we retrench they go home without a pie in their pockets. Therefore I urge the necessity of giving employment to them somewhere immediately they are retrenched so that their services for the last ten years in the Mysore State may not go in vain.

Sri R. ANANTARAMAN(Chamarajpet).—I fully associate myself with what my friend Sri Srinivasa Iyengar has spoken. It is true that in the Madras State bonus is given to employees whenever their services are terminated. I request that bonus be given to them and also they be re-employed if there are vacancies.

As regards the prices of foodstuffs, Government have been kind enough to reduce the price of rice. They have now ordered that the rice may be sold at 1 3/4 seers per rupee. Fine rice today is collected by paying Rs. 22 per palla. The transport and hulling charges will cost about Rs. 1-8-0 and the total cost will come to about Rs. 24. Even then, people think that the Government are making some profit by selling at 1 3/4 seers per rupee. I request the Government to see that the price is still lowered because you are aware in Bangalore City people are not taking the rice from the Fair Price Depots. They go to the open market and purchase rice, because it is a little bit cheaper. Also it is better polished.

(SRI R. ANANTARAMAN.)

I therefore request you to be kind enough to reduce the price by a few annas more and sell it at 2 seers a rupee. Thereby the Government will not be incurring any loss. I do not recommend that the Government must put themselves to loss. So I hope they will be sympathetic enough and lower the prices still.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಆಹಾರ ಡಿಪೋಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಮೆಮಾಡಬೇಕೆಂದು ಸೂಚಿಸುವ ಉದ್ದೇಶದಿಂದ ನಿಂತಿರುತ್ತೇನೆ. ಈಗಿರುವ ಅನೇಕ ಡಿಪೋಗಳು ಕೆಲಸಮಾಡುತ್ತಿಲ್ಲ. ಕಾರಣ, ಬೆಂಗಳೂರು, ಶಿವಮೊಗ್ಗ, ಮೈಸೂರು ಮತ್ತು ಮಂಡ್ಯ ಡಿಸ್ಟ್ರಿಕ್ಟ್‌ಗಳಲ್ಲಿ ಆಹಾರ ಧಾನ್ಯಗಳ ಉತ್ಪತ್ತಿ ಅಧಿಕವಾಗಿ ಆಗಿದೆ. ರೈತರಿಗೆ ಮತ್ತು ಕೂಲಿಗಾರರಿಗೆ ಈ ಧಾನ್ಯಗಳು ಡಿಪೋಗಳಲ್ಲಿ ದೊರ ಕುವುದಕ್ಕಿಂತ ಕಡಮೆ ಬೆಲೆಗೆ ಸಿಕ್ಕುತ್ತದೆ. ಇದರ ಪರಿ ಣಾಮವಾಗಿ ಹಳೆಯ ನರಕು ಈ ಡಿಪೋಗಳಲ್ಲಿ ನಿಂತು ತನ್ಮೂಲಕ ನಷ್ಟವಾಗುತ್ತಿದೆ. ಈಗಾಗಲೇ ಗೋಧಿ ಮತ್ತು ಅಕ್ಕಿಗೆ ಹುಳಗಳು ಬಿದ್ದು ಕೆಲವು ಡಿಪೋಗಳಲ್ಲಿ ನಷ್ಟವಾಗಿದೆ, ಮತ್ತು ಈ ಡಿಪೋಗಳಲ್ಲಿ ಈಗಿರುವ ಹೆಚ್ಚಿನ ಸಿಬ್ಬಂದಿ ಅನಗತ್ಯ. ಈಗ ಡಿಪೋಗಳಲ್ಲಿರುವ ಸಿಬ್ಬಂದಿ ವೆಚ್ಚ ಬಹಳಮಟ್ಟಿಗೆ ಜಾಸ್ತಿಯಾಗಿದೆ. ಮೊದಲು ಆಹಾರ ಹತೋಟಿ ವ್ಯವಸ್ಥೆ ಇದ್ದು ಈ ಸಿಬ್ಬಂದಿಯ ಅಗತ್ಯವಿತ್ತು : ಈಗ ಇದರ ಅವಶ್ಯಕತೆ ಇಲ್ಲ. ಈಗ ಆಹಾರ ಧಾನ್ಯಗಳು ಯಥೇಚ್ಛವಾಗಿ ಸಿಕ್ಕುತ್ತಿರಬೇಕಾದರೆ ಈ ಡಿಪೋಗಳ ಅಗತ್ಯವೇ ಇಲ್ಲ. ಸಾಧ್ಯವಾದಷ್ಟು ಕಡಮೆಮಾಡುವುದರಿಂದ ಇವುಗಳ ಬಗ್ಗೆ ತಗಲುತ್ತಿರುವ ಸಿಬ್ಬಂದಿ ವೆಚ್ಚ ಕಡಮೆಯಾಗಿ ಸರ್ಕಾರಕ್ಕೆ ಈ ಬಗ್ಗೆ ಖರ್ಚು ಕಡಮೆಯಾಗುತ್ತದೆ. ರೈತರ ಹಿತದೃಷ್ಟಿಯಿಂದಲೂ ಸಹ ಈ ಡಿಪೋಗಳನ್ನು ಕಡಮೆಮಾಡಿ ಸಾಧ್ಯವಾದಮಟ್ಟಿಗೂ ಮಲ್ಟ ಪರ್ಪಸ್ ಸೊಸೈಟಿಗಳ ಮೂಲಕ ಯಥೇಚ್ಛವಾಗಿ ಈ ಸಾಮಗ್ರಿ ಗಳು ದೊರಕುವ ಹಾಗೆ ಮಾಡಬೇಕು. ಇಷ್ಟೇ ಅಲ್ಲದೆ ಈ ಡಿಪೋಗಳ ವಿಚಾರದಲ್ಲಿಯೇ ಆಗಲಿ, ಮಲ್ಟ ಪರ್ಪಸ್ ಸೊಸೈಟಿಗಳ ವಿಚಾರದಲ್ಲಿಯೇ ಆಗಲಿ ಆಡಿಟ್ ವ್ಯವಸ್ಥೆ ಯನ್ನು ಸಮರ್ಪಕವಾದ ರೀತಿಯಲ್ಲಿ ಏರ್ಪಡಿಸಬೇಕು. ಇಷ್ಟು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಇಲಾಖೆಯಲ್ಲಿ ಕೆಲಸವಾಡತಕ್ಕವರನ್ನು ಕೆಲಸದಿಂದ ತೆಗೆದು ಹಾಕಿದಮೇಲೆ ಅವರು ಏನು ಮಾಡಬೇಕೆಂಬ ವಿಚಾರ ದಲ್ಲಿ ಅನೇಕ ಮಾನ್ಯ ಸದಸ್ಯರು, ಅದರಲ್ಲಿಯೂ ಮುಖ್ಯ ವಾಗಿ ಶ್ರೀ ಪಿ. ಆರ್. ರಾಮಯ್ಯನವರು ಬಹಳ ಕಳ ಕಳಿಯಿಂದ ಸರ್ಕಾರಕ್ಕೆ ಮನವಿಮಾಡಿರುತ್ತಾರೆ. 1947-48ರಲ್ಲಿ ಈ ಇಲಾಖೆಯಲ್ಲಿ 7,821 ಮಂದಿ ನೌಕರದಾರರು ಕೆಲಸಮಾಡುತ್ತಿದ್ದರು. ಅವರಬಗ್ಗೆ ಖರ್ಚು, ಸಿಬ್ಬಂದಿ ಖರ್ಚು—Dearness Allowance ಮತ್ತು High Price Allowance ಬಿಟ್ಟು—38,04,000 ರೂಪಾಯಿಗಳಷ್ಟಿತ್ತು. ಈ ಇಲಾಖೆಯ ಕಾರ್ಯಕ್ರಮಗಳು ಇತ್ತೀಚೆಗೆ ಆಹಾರದ ಹತೋಟಿ ನಡಿಲಮಾಡಿದಮೇಲೆ ಕಡಿಮೆಯಾಗುತ್ತಾ ಬಂದು, 1952-53ರಲ್ಲಿ ಈ ಇಲಾಖೆಯ ಸಿಬ್ಬಂದಿಯ ಸಂಖ್ಯೆ 6,057ಕ್ಕೆ ಇಳಿದು, ಖರ್ಚು ವೆಚ್ಚ 37,04,000ಕ್ಕೆ ಬಂತು. ಅನಂತರ 1953-54ರಲ್ಲಿ ಇಲಾಖೆಯ ಸಿಬ್ಬಂದಿಯ ಸಂಖ್ಯೆ 3,178ಕ್ಕೆ ಇಳಿದು, ಖರ್ಚುವೆಚ್ಚ 33,03,000 ರೂಪಾಯಿಗಳಿಗೆ ಬಂತು. ಈ ಸಾಲಿ ನಲ್ಲಿಯೂ ಸಹ ಈ ಬಗ್ಗೆ ಬಹಳ ಖೋತಾ ಮಾಡಿರುವುದ ರಿಂದ ಈ ಬಗ್ಗೆ ಖರ್ಚುವೆಚ್ಚ 24-25 ಲಕ್ಷಕ್ಕೆ ಮೀರಿ ಆಗ ಲಾರದು. '1954-55ರಲ್ಲಿ ಬಡ್ಜೆಟ್‌ನ ಅಂಕಿಅಂಶ ಗಳಿಂದ ಈ ಸಿಬ್ಬಂದಿ ಸಂಖ್ಯೆ 2,883ಕ್ಕೆ ಇಳಿದು, ಖರ್ಚು 2,40,900 ರೂಪಾಯಿಗಳಾಗಬಹುದೆಂದು ನಿರೀಕ್ಷಿ ಸಿದ್ದರೂ ಅದಕ್ಕಿಂತಲೂ ಕಡಮೆಯಾಗುವ ಸಂಭವವು ಇದೆಯೆಂದು ತಿಳಿಸಲು ಸಂತೋಷಪಡುತ್ತೇನೆ. ಈ ರೀತಿ ಈ ಇಲಾಖೆಯ ಖರ್ಚು ವೆಚ್ಚ ಕ್ರಮೇಣ ಕಡಮೆ ಯಾಗಿ ಈ ಬಗ್ಗೆ ಕೆಲಸದಿಂದ ವಜಾ ಆದವರಿಗೆ ಯಾವ ರೀತಿ ಬೇರೆ ಕೆಲಸಕೊಡಬೇಕೆಂಬುದನ್ನೂ ಸರ್ಕಾರ ದವರು ದೃಷ್ಟಿಯಲ್ಲಿಟ್ಟುಕೊಂಡು ಆಲೋಚಿಸುತ್ತಿ ದ್ದಾರೆ, ಅವರೇನೂ ಕಣ್ಣುಮುಚ್ಚಿಕೊಂಡು ಕುಳಿತಿಲ್ಲ. ಈಗಾಗಲೇ ಇವರಿಗೆಲ್ಲಾ ನೂಕ್ತರೀತಿಯ ಕೆಲಸ ಕೊಡು ವಂತೆ ಪಬ್ಲಿಕ್ ಸರ್ವಿಸ್ ಕಮಿಷನ್ನಿಂದಿಗೆ ಪತ್ರವ್ಯವ ಹಾರ ನಡೆಸಿದೆ. ಅವರು ಈ ಬಗ್ಗೆ ನೂಕ್ತ ಕಾರ್ಯ ಕ್ರಮ ಕೈಗೊಳ್ಳುತ್ತಾರೆಂಬ ಭರವಸೆ ಇದೆ. ಅಲ್ಲದೆ, ಅವರು ಇದರ ವಿಚಾರದಲ್ಲಿ ಸಹಾನುಭೂತಿಯಿಂದ ಸಹ ವರ್ತಿಸುತ್ತಾರೆಂಬ ನಂಬಿಕೆ ಇದೆ.

ಶ್ರೀ ಎಸ್. ಗೋಪಾಲಗೌಡರು ಈ ಇಲಾಖೆಯಲ್ಲಿ ಸ್ವಲ್ಪ ಹಣ ಪೋಲಾಗಿದೆಯೆಂಬುದನ್ನು ತಿಳಿಸಿದ್ದಾರೆ. ಈ ಇಲಾಖೆ ಹುಟ್ಟಿದಮೇಲೆ ಇದುವರೆಗೆ 90 ಕೋಟಿ ರೂಪಾಯಿಗಳ ವ್ಯವಹಾರ ನಡೆಸಿದೆ. ಇಂಥದರಲ್ಲಿ ಅಲ್ಲಲ್ಲಿ ಕೆಲವು ಲೋಪದೋಷಗಳು ಕಂಡುಬರಲು ಅವ ಕಾಶವಾಗಿರಬಹುದು. ಇದಕ್ಕಾಗಿಯೇ ಸರ್ಕಾರ ದವರು ಆಡಿಟ್ ವ್ಯವಸ್ಥೆಯನ್ನು ಏರ್ಪಡಿಸಿರುವುದು. ಇದಕ್ಕೆ ಸಂಬಂಧಿಸಿದ ಹಣದಬಗ್ಗೆ write off ಮಾಡ ತಕ್ಕ ಯಾವ ಬಾಬಾದರೂ ನನ್ನ ಬಳಿಗೇ ಬರಬೇಕು. ಆಗ ಸಕಾರಣಗಳಿದ್ದರೆ, ನರಿಯಾದ ರೀತಿ ನೀತಿ ಇದ್ದರೆ ಸರ್ಕಾರದವರು write offಗೆ ಒಪ್ಪಿಗೆಕೊಡುತ್ತಾರೆಯೇ ಏನಾ, ಇಲ್ಲದಿದ್ದರೆ ಸಂಬಂಧಪಟ್ಟವರಮೇಲೆ ಜವಾಬ್ದಾರಿ ಹೊರಿಸಿ ಆ ಹಣವನ್ನು ಅವರಿಂದ ವಸೂಲುಮಾಡುತ್ತಾರೆ. ಆದುದರಿಂದ ಈ ವಿಚಾರ ದಲ್ಲಿ ಮಾನ್ಯ ಸಭೆಯು ಯಾವ ಕಳವಳವನ್ನೂ ವ್ಯಕ್ತ ಪಡಿಸುವುದಕ್ಕೆ ಕಾರಣವಿಲ್ಲವೆಂದು ಹೇಳುತ್ತೇನೆ.

ಇನ್ನು ಆಹಾರ ಧಾನ್ಯಗಳ ಧಾರಣೆ ವಾಸಿಗಳು ಕಡಮೆಯಾಗುತ್ತಿರುವ ವಿಚಾರ ಕೆಲವರು ತಿಳಿಸಿದರು. ಈಗತಾನೇ ಈ ಧಾರಣೆ ಕಡಮೆಯಾಗಿರುವುದರಿಂದ ಪರಿಸ್ಥಿತಿ ಏನಾಗುತ್ತಿದೆ ಎಂಬುದನ್ನು ನೋಡಬೇಕು. ಸರ್ಕಾರದವರು ಆದಷ್ಟುಮಟ್ಟಿಗೂ ಅವರ ಹತೋಟಿ ಯಲ್ಲಿರುವ ಧಾನ್ಯಗಳ ವಿಚಾರದಲ್ಲಿ considerable wastageಗೆ ಸ್ವಲ್ಪವೂ ಅವಕಾಶ ಕೊಡದಂತೆ ನೋಡಿ ಕೊಳ್ಳುವುದೇ ಅವರ ನೀತಿಯಾಗಿದೆಯೆಂದು ಮಾತ್ರ ತಿಳಿಸುತ್ತೇನೆ. ಕೊನೆಯದಾಗಿ, ಆದಷ್ಟು ಜಾಗ್ರತೆ ಈ ಇಲಾಖೆಯನ್ನೇ ರದ್ದುಪಡಿಸುವಂತಾಗಿ, ಆಹಾರ ಸಾಮಗ್ರಿಗಳ ವಿಚಾರದಲ್ಲಿ ಹತೋಟಿ ಪರಿಸ್ಥಿತಿಗೇ ಅವಕಾಶವಿಲ್ಲದಂತಾಗಿ ದೇಶವು ಸುಭಿಕ್ಷಿತವಾಗಿರಲೆಂದು ಹಾರೈಸುತ್ತೇನೆ.

Mr. SPEAKER—The question is :

" That a sum not exceeding Rs. 5,51,00,000 be granted to the Government to defray the charges which will come in course of payment during the year ending 31st

day of March 1955, in respect of 'Capital Outlay on Schemes of State Trading'."

The motion was adopted.

DEMAND No. 45—ADVANCES AND LOANS.

R. Loans and Advances by the State Government.

Mr. SPEAKER.—Motion moved:

"That a sum not exceeding Rs. 2,62,77,000 be granted to the Government to defray the charges which will come in course of payment during the year ending 31st day of March 1955, in respect of 'Loans and Advances by the State Government'."

Sri Srinivasa Iyengar has sent a number of cut motions. Let him have the first chance to speak on the demand.

Sri M. PALANIYAPPAN (Ulsoor).—I too have sent.

Mr. SPEAKER.—You will have a chance.

Sri S. SRINIVASA IYENGAR (T.-Narasipur).—Mr. Speaker, Sir, I oppose the Demand. Loans and Advances by Government are being made from a very long time. If I may be permitted to say so, in the words of the Ex-Minister Sri T. Siddalingaiya, it is being made from *Obirayanakala*. The loans no doubt are being issued but the way in which the collections are being made is highly unsatisfactory. This statement is based on the observation made by the Auditor-General in his Finance Account of 1950-51. The Auditor-General says:

> Conditions of loans have been fulfilled except that the dates of repayment of the loan have not been adhered to in some cases, barring those in respect of loans to Government servants.

Sir, in the year 1946-47, the Government had as its assets a sum of 64·22 lakhs under the head 'Loans and Advances' by Government. In the course of seven years, that is from 1946-47 to 1954-55, the Goverement have managed to issue loans to the tune of 4½ crores and according to the assets and liabilities statement of the Government of Mysore, as it stands at the close of 1954-55, the amount of money that will be due to Government under this head is 4·97 crores. Sir, as regards recovery, a number of questions have been tabled on the floor of this House and the Hon'ble Minister was pleased to assure us in answer to a question that was taken up on 26-6-1952 as follows:—

> "As soon as this Ministry assumed office, we have passed a general Government order that every loan must be collected strictly in accordance with the terms of the agreement."

We would like to know, how far these loans have been recovered in the course of these two years.

Sir, loans are issued for various purposes. Loans are issued to municipalities; loans are issued to notabilities; loans are issued to cultivators and then there are miscellaneous loans and industrial loans. In 1954-55, the Government of Mysore estimated the issue of these loans at 2·02 crores; and if these loans are issued according to estimates, then the amount of loan that will be due in the following categories stand as follows: From the Municipalities, the Government of Mysore will have to get about 80 lakhs; from landholders and notabilities 30 lakhs; from cultivators 100 lakhs; miscellaneous industrial loans about 4½ crores and advances to Government servants about 35 lakhs.

I have no wish to refer to loans to Government servants because the Hon'ble the Chief Minister answered the other day that they are fully secured and that they have a firm hold on their salaries and therefore the recovery cannot be doubted. But as regards the industrial loans, I have every doubt. All this amount of 4·97 crores is treated as assets of the Government of Mysore. I would like to know, Sir, how much of this loan is bad debt, and how much is irrecoverable debt and how

(SRI S. SRINIVASA IYENGAR.)

much can be recovered, whether Government of Mysore have taken the necessary steps to collect these loans. Sir, the Public Accounts Committee have observed as follows as regards the mode of collection of the loans :—

> "The Committee feels that if effective steps are not taken, an appreciable portion of the advance is likely to be lost."

And therefore, I have to press upon the Government the urgency of collecting these loans. These loans are advanced out of borrowed funds. The Government of Mysore pays interest irrespective of the fact whether recoveries have been made or not. And it is all the more necessary that we should take effective steps for the collection of these loans.

Sir, as regards collection of the loan, I must say, it has been very slow. In the year 1950-51, the Government of Mysore had collected 25.34 lakhs, but it fell down to 20.46 lakhs in the year 1951-52; and in 1952-53 the actual amount that has been collected is 20.45 lakhs against an outstanding balance of 2·54 crores. In the current year 1953-54 the revised estimate shows that the Government is confident of collecting 39.44 lakhs against an outstanding balance of 3.45 crores. We have yet to see whether the estimate would come true, when the accounts are presented to us.

Sir, the Government of Mysore have issued loans for various purposes; a sum of Rs. 44,000 was advanced towards dairy farming. And under industrial loans, to various institutions loans have been issued, the most important being the Radio and Electricals Manufacturing Co., Ltd., the Ganesha Textiles, Ltd., the Shankara Textiles, Ltd., the Mysore Chrome Tanning Co., Tobacco Co., Ltd., the Mysore Silk Filatures, Mysore Waterproof Co. I am afraid, Sir, that if prompt action is not taken, the Government will certainly lose a large part of this loan. It will be a serious loss to the general tax-payer, and therefore I would urge the Government to see that prompt recoveries are being made.

Sir, about this Radio Electrical Co., Ltd., in addition to a loan of 23.25 lakhs, a provision of Rs. 10 lakhs had been made in 1952-53; we do not know whether that loan has been issued. Once again to my astonishment, I find a similar provision of 10 lakhs in 1954-55. I would like to know why they should provide such a huge sum as loan towards an industry which is already heavily indebted to the Government of Mysore. For many industrial concerns, loans have been issued without definitely ascertaining the percentage of return and whether the concerns are working satisfactorily. Therefore, a great responsibility is on the shoulders of the Government at the time of issuing the loans, especially when they are dealing with borrowed funds. So, I would like to urge upon the Government to be more careful than they are in regard to issue of loans and see how far they will be able to fulfil the assurance held out in respect of recovery of these amounts to avoid loss to the State. In answer to a certain question from Sri Chiklingiah *re*: compilation of list of Debtors of Mysore State, the Hon'ble Chief Minister said that it would take a long time but nevertheless he assured that he would try his level best to see that these debtors are listed with the dates of granting loans and recoveries. I have yet to know whether that assurance has been fulfilled and if not, this House will certainly desire to know at what stage this stands.

* ಶ್ರೀ ಡಿ. ದೇವರಾಜ ಅರಸ್ (ಹುಣಸೂರು).— ಸ್ವಾಮಿ, ತಾವು ಹೋದ ಸಾಲಿನಲ್ಲಿ ಎಂದರೆ 1953-54 ನೇ ಸಾಲಿನಲ್ಲಿ loans to landholders and other notabilities ಗೆ 15 ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದೀರಿ. ಈ ಸಾಲಿನಲ್ಲಿ 7 ಲಕ್ಷ ರೂಪಾಯಿ ಮಾತ್ರ ಒದಗಿಸೋಣವಾಗಿದೆ. ಮುಖ್ಯವಾಗಿ ರೈತರಿಗೆ ನಾನಾ ವಿಧದಲ್ಲಿ ಸರ್ಕಾರದವರು ಸಾಲಕೊಡುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಅದರಲ್ಲಿ ತಕಾವಿ ಲೋನ್ ಎಂಬುದು ಒಂದು. ಜಮೀನು ಅಭಿವೃದ್ಧಿ ಮಾಡುವುದಕ್ಕೆ ಆ ಸಾಲವನ್ನು ತಾವು ಒದಗಿಸಿ ಕೊಡುತ್ತಿದ್ದೀರಿ. ಸ್ವಾಮಿ, ತಮಗೆ ಗೊತ್ತಿರುವ ಹಾಗೆ ರೈತರು ವ್ಯವಸಾಯ ಕಾಲದಲ್ಲಿ ತಮಗೆ ಬೇಕಾದಂಥ ಸಲಕರಣೆಗಳನ್ನು ಒದಗಿಸಿಕೊಳ್ಳುವುದಕ್ಕೂ ಮತ್ತು ಕೂಲಿಗಳಿಗೆ ಸಂಬಳಗಳನ್ನು ಕೊಡುವುದಕ್ಕೂ ದುಡ್ಡು ಸಾಲದೆ ಅನೇಕರು ಸಾವುಕಾರರ ಹತ್ತಿರ ಅಥವಾ ವ್ಯಾಪಾರನ್ಯರ ಹತ್ತಿರ ಹೋಗಿ ತಾವು ಬೆಳೆಮಾಡತಕ್ಕ ಪದಾರ್ಥಗಳನ್ನು ಅವರಿಗೆ ಯಾವುದೋ ಒಂದು ಗೊತ್ತಾದ ದರದಲ್ಲಿ ಇಷ್ಟಕ್ಕೆ ಕೊಡುತ್ತೇವೆ ಎಂದು ಹೇಳಿ ಮುಂಗಡವಾಗಿಯೇ ಗೊತ್ತು ಮಾಡಿಕೊಂಡು

ಹಣವನ್ನು ಸಾಲವಾಗಿ ಪಡೆದುಕೊಂಡು ಬರಬೇಕಾದ ಸ್ಥಿತಿ ಇನ್ನೂ ಕೂಡ ನಮ್ಮ ದೇಶದಲ್ಲಿ ಉಳಿದು ಬಂದಿದೆ. ಅದರಿಂದ ವ್ಯವಸಾಯಗಾರರಿಗೆ ಬಹಳ ವಾಗಿ ತೊಂದರೆ ಆಗುತ್ತಾ ಇದೆ. ಈ ತೊಂದರೆಯನ್ನು ತಪ್ಪಿಸಲಿಕ್ಕೆ ಸರ್ಕಾರದವರು ಯಾವುದಾದರೂ ಒಂದು ತೀವ್ರವಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಕಾವಿ ಲೋನು, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನು ಇತ್ಯಾದಿ ಇತ್ಯಾದಿಯಾಗಿ ಸಹಾಯ ಒದಗಿಸುತ್ತಾ ಇದ್ದೇವೆ, ಅದರಿಂದ ಅನೇಕರಿಗೆ ಅನುಕೂಲವಾಗಿದೆ ಎಂದು ತಾವು ಹೇಳಬಹುದು. ಆದರೂ ಕೂಡ ತಾವು ಕೊಡುತ್ತ ಇರತಕ್ಕ ಸಾಲಗಳು ಅನೇಕ ವೇಳೆ ರೈತರಿಗೆ ಬೇಕಾದ ಸಮಯಕ್ಕೆ ಒದಗುವುದಿಲ್ಲ. ಒದಗಿದರೂ ಕೂಡ ಆ ವರ್ಷ ವ್ಯವಸಾಯ ಕಾಲದಲ್ಲಿ ಒಬ್ಬ ರೈತನಿಗೆ 100 ರೂಪಾಯಿಬೇಕಾಗಿದ್ದರೆ, 100 ರೂಪಾಯಿ ಪೂರ್ತಿಯಾಗಿ ಒದಗುವುದಿಲ್ಲ. ಇದೂ ಅಲ್ಲದೆ ಈಗ ತಾವು ಯಾವ ಒಂದು ಚೌಕಟ್ಟಿನಲ್ಲಿ ಸಾಲ ಕೊಡುತ್ತ ಇದ್ದೀರಿ, ಅದೂ ಕೂಡ ಅನೂಚಾನವಾಗಿ ಬಂದ ಪದ್ಧತಿಯನ್ನು ಮುಂದುವರಿಸಿಕೊಂಡು ಬರುತ್ತಾ ಇದ್ದೀರಿ. ತಾಲ್ಲೂಕು ಆಫೀಸಿನಲ್ಲಿ, ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಈ ಸಾಲಗಳು ಏನಾದರೂ ರೈತರಿಗೆ ಕೊಡಬೇಕಾದ ಸಂದರ್ಭ ಬಂದಾಗ ಈಗಿರತಕ್ಕ ಕಾನೂನು ಪ್ರಕಾರ ರೈತರು ಈ ಸಾಲವನ್ನು ಹಿಂದಕ್ಕೆ ಕೊಡದೆ ಹೋದರೆ ಸಾಲ ಮಂಜೂರುಮಾಡತಕ್ಕ ಆಫೀಸರುಗಳ ಮೇಲೆ ಆ ಜವಾಬ್ದಾರಿಯನ್ನು ಹೇರಿರುವುದರಿಂದ, ಒಂದು ವೇಳೆ ಸಾಲ ರಿಕವರ್ ಆಗದೇ ಇದ್ದರೆ ಅವರ ಸಂಬಳದಲ್ಲಿ ಹಿಡಿಯಬೇಕೆಂದು ಕಾನೂನು ಮಾಡಿರುವುದರಿಂದ ಅವರು ಸರ್ವೇ ಸಾಧಾರಣವಾಗಿ ಆ ಸಾಲಗಳನ್ನು ಆದಷ್ಟು ಕೊಡದೇ ಇರುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾತ್ರ ಹೆಚ್ಚಾಗಿ ಮಾಡುತ್ತಾರೆಯೇ ಹೊರತು ಸಾಲ ಮಂಜೂರು ಮಾಡುವುದಕ್ಕೆ ಪ್ರಯತ್ನ ಪಡುವುದಿಲ್ಲ. ಇದು ನನ್ನ ಸ್ವಂತ ಅನುಭವಕ್ಕೆ ಬಂದಿದೆ. ನಮಗೇನಾದರೂ ಕಷ್ಟ ಬಂದೀತು. ನಮ್ಮ ಕೈಯಿಂದ ಸಾಲ ಕೊಡಬೇಕೆಂದು ಮಾಡಿರುವುದರಿಂದ ಒಂದು ವೇಳೆ ರೈತ ಹಿಂದಕ್ಕೆ ಸಾಲಕೊಡದಿದ್ದರೆ ತೊಂದರೆ ಪಡಬೇಕಾಗುತ್ತದೆ ಎಂದು ಹೇಳಿ ಅದನ್ನು ಸಾಧ್ಯವಾದಮಟ್ಟಿಗೂ ಶಿಫಾರಸು ಮಾಡುವುದಕ್ಕೆ ಹಿಂತೆಗೆಯುತ್ತಾರೆ. ಇದನ್ನು ಸರಿಪಡಿಸಬೇಕು.

ಈ ಸಂದರ್ಭದಲ್ಲಿ ಸರ್ಕಾರದವರಿಗೆ ಒಂದು ಸಲಹೆ ಕೊಡಲು ಇಚ್ಛೆಪಡುತ್ತೇನೆ. ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಬೇಕೆಂಬ ಮನೋದ್ದೇಶದಿಂದ ನಮ್ಮ ದೇಶದಲ್ಲಿ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮಾಡಬೇಕೆಂದು ಹೇಳುತ್ತಾ ಇದ್ದೀರಿ. ಅದೇ ರೀತಿ ವ್ಯವಸಾಯವನ್ನು ಕೂಡ ಅಭಿವೃದ್ಧಿ ಮಾಡಬೇಕೆಂಬ ಉದ್ದೇಶ ತಮಗೂ, ನಮಗೂ ಎಲ್ಲರಿಗೂ ಇರುವಾಗ ರೈತರಿಗೆ ಈ ಸಾಲ ಸುಲಭವಾಗಿ ಸಿಕ್ಕುವ ರೀತಿಯಲ್ಲಿ ಮಾಡಬೇಕಾದರೆ ಒಂದು ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್ ಎನ್ನುವುದನ್ನು ನಮ್ಮ ದೇಶದಲ್ಲಿ ಏರ್ಪಡಿಸಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ರೀತಿ ಕಾರ್ಪೊರೇಷನ್ ಮೂಲಕವಾಗಿಯೋ ಅಥವಾ ಕೋ-ಆಪರೇಟಿವ್ ಸೊಸೈಟಿಗಳ ಮೂಲಕವಾಗಿಯೋ ಸುಲಭವಾಗಿ ರೈತನಿಗೆ ಬೇಕಾದ ಹಣ ಕೂಡಲೇ ವ್ಯವಸಾಯದ ಕಾಲದಲ್ಲಿ ಸಲ್ಲಬೇಕು. ಹೀಗೆ ಷಾರ್ಟ್‌ಟರ್ಮ್ ಲೋನ್ ಸುಲಭವಾಗಿ ಸಿಕ್ಕುವ ಹಾಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡಬೇಕು. ಅದಕ್ಕೆ ನಾನು ಮೊದಲೇ ಹೇಳಿದ ಹಾಗೆ ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್ನನ್ನು ರಚನೆ ಮಾಡಬೇಕಾದ ಅಗತ್ಯ ತೀವ್ರವಾಗಿ ನಮಗೆ ಈಗ ಇದೆ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ 10 ಲಕ್ಷ ರೂಪಾಯಿ ಉದಾರವಾಗಿ ಸರ್ಕಾರದಿಂದ ಸಾಲ ಕೊಟ್ಟಿದ್ದೀರಿ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳಿಂದ ರೈತರಿಗೆ ಸರಿಯಾಗಿ ಸಹಾಯವಾಗುತ್ತಾ ಇಲ್ಲ. ಮತ್ತು ಸಕಾಲಕ್ಕೆ ಸಾಲ ದೊರೆಯುತ್ತಾ ಇಲ್ಲ. ಜಮೀನು ಅಡಮಾನದ ಬ್ಯಾಂಕುಗಳಲ್ಲಿ ಕೊಡತಕ್ಕ ಸಾಲ ಲಾಂಗ್‌ಟರ್ಮ್ ಲೋನು ತೀರಿಸುವುದಕ್ಕೆ ಎಂದು ಹೇಳುತ್ತಾರೆ. ರೈತರಿಗೆ ಹಿಂದೆ ಸಾಲ ಇದ್ದು ಆ ಸಾಲ ತೀರಿಸುವುದಕ್ಕೆ ಮಾತ್ರ ಈ ಸಾಲಕೊಡುತ್ತಾ ಇರುವುದು. ಆದರೂ ಎಲ್ಲರಿಗೂ ಸರಿಯಾಗಿ ಸಾಲ ದೊರೆಯುತ್ತಾ ಇಲ್ಲ. ಚೆನ್ನಾಗಿ ಪರಿಚಯವನ್ನಹರಾದ ಜನರು ಇದ್ದು ಶಿಫಾರಸು ಮಾಡಿದ ಪಕ್ಷದಲ್ಲ, ಶಿಫಾರಸಿನಿಂದ ಸಾಲ ಸೋಲ ದೊರೆಯಬೇಕೇ ಹೊರತು ಸಲೀಸಾಗಿ ದೊರೆಯುವುದಿಲ್ಲ. ಇದು ಒಂದು ದೊಡ್ಡ ಕಷ್ಟವಾಗಿದೆ. ನಾನಾದರೂ ಸಲಹೆ ಕೊಡುವುದು ಅಪೆಕ್ಸ್ ಬ್ಯಾಂಕ್ ಮತ್ತು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮೂಲಕ ರೈತರಿಗೆ ಸಾಲ ಕೊಡಬೇಕೆಂದು ಹೇಳುವಾಗ ರೈತರಿಗೆ ಅಡಮಾನದ ಬ್ಯಾಂಕಿನಿಂದ ಅನೇಕ ಸಂದರ್ಭಗಳಲ್ಲಿ ಸಾಲ ದೊರೆಯುತ್ತಿಲ್ಲ, ಇದನ್ನು ತಾವು ಜ್ಞಾಪಕದಲ್ಲಿಡಬೇಕು. ಯಾವ ಘನೋದ್ದೇಶದಿಂದ ಈ ಸಾಲ ಕೊಡುತ್ತಿದ್ದಾರೋ ಅದು ಸಫಲವಾಗಬೇಕಾದರೆ ಏಜನ್ಸಿಯಿರುವುದು ಖಂಡಿತ ಬದಲಾವಣೆಯಾಗಬೇಕು. ಈಗ ಸಾಲವನ್ನು ಕೊಡುವ ಕಾನೂನು ಕಟ್ಟಳೆ ಬದಲಾವಣೆಯಾಗಬೇಕು. ಕಾವೇರಿಗೆ 2—3 ಡಿಸ್ಟ್ರಿಕ್ಟ್‌ಗಳಲ್ಲಿ ಒಂದು ಕೋ-ಆಪರೇಟಿವ್ ಸೊಸೈಟಿ ಮಾಡಿ ಅದರ ಮೂಲಕ ಸಾಲ ಕೊಡಬೇಕೆಂದು ಮಾಡಿದ್ದೀರೆಂದು ತಿಳಿಯುತ್ತೇನೆ. ಇದು ಎಲ್ಲ ಜನರಿಗೂ ಕೂಡ ಅನ್ಯಾಯವಾಗುವ ಹಾಗೆ ರೂರಲ್ ಕ್ರೆಡಿಟ್ ಬ್ಯಾಂಕನ್ನು ಎಲ್ಲಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲೂ ಮತ್ತು ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲೂ ತೆರೆಯಲು ಏರ್ಪಾಡು ಮಾಡಿ ಈಗ ಯಾವ ಯಾವ ಸಾಲಗಳನ್ನೊದಗಿಸುತ್ತಿದ್ದೀರೋ ಅವೆಲ್ಲವೂ ಒಂದೇ ಆಫೀಸಿನಲ್ಲಿ ಅಥವಾ ಬ್ಯಾಂಕಿನಲ್ಲಿ ಅಥವಾ ಕಾರ್ಪೊರೇಷನ್‌ನಲ್ಲಿ ಅಥವಾ ಕೋ-ಆಪರೇಟಿವ್ ಸೊಸೈಟಿಯಲ್ಲಿ ನೇರವಾಗಿ ದೊರೆಯುವಂತೆ ಮಾಡಬೇಕು. ಈಗ ಇಟ್ಟುಕೊಂಡಿರುವ ನಾನಾ ವಿಧವಾದ ವ್ಯವಸ್ಥೆಗಳಿಂದ ರೈತನ್ಯಾ ಸಾಲ ಮುಂತಾದವನ್ನು ಎಲ್ಲಿ ಕೊಡುತ್ತಾರೆ, ಯಾರನ್ನು ಕೇಳಬೇಕು ಯಾರಿಂದ ಪಡೆಯಬೇಕು ಯಾವ ಆಫೀಸಿನಲ್ಲಿ ಕೇಳಬೇಕು ಎಂಬುದು ರೈತರಿಗೆ ಗೊತ್ತಾಗುತ್ತಿಲ್ಲ. ಈ ದಿವಸ ಸಾಲ ಬೇಕಾದರೆ 6 ತಿಂಗಳು ಅಥವಾ ಒಂದು ವರ್ಷ ಕಷ್ಟಪಡಬೇಕು. ಅಧಿಕಾರಿಗಳ ಕೈಕಾಲು ಕಟ್ಟಿ ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಹೋಗಿ ವಿಚಾರಿಸಿ ಸಾಲ ಪಡೆಯಬೇಕಾದರೆ ಬಹಳ ಕಷ್ಟವಾಗುತ್ತದೆ. ಈ ಕಷ್ಟ ನಿವಾರಣೆಯಾಗಬೇಕು. ಈ ತೊಂದರೆಯಿಂದ ಎಷ್ಟೋ ಬಡ್ಡಿಯಾದರೂ ರೈತರು ಸಾಹುಕಾರರಿಂದ ಸಾಲ ತರಬೇಕಾಗಿದೆ. ಕಡಲೆಕಾಯಿ, ಹತ್ತಿ, ಹೊಗೆಸೊಪ್ಪು, ಬೆಲ್ಲ, ರಾಗಿ ಮುಂತಾದ ಎಲ್ಲಾ ಪದಾರ್ಥಗಳನ್ನೂ ಹಣದ ಆತುರದಿಂದ ಬೆಳೆದ ಕೂಡಲೆ ಕಡಮೆ ದರದಲ್ಲಿ ಸಾಹುಕಾರರಿಗೆ ಕೊಟ್ಟು ಸಾಲ ತಂದು ರೈತ ವ್ಯವಸಾಯ ಮುಂದುವರಿಸಬೇಕಾಗಿದೆ. ಇದು ನನ್ನ ಸ್ವಂತ ಅನುಭವ. ತಾವೇನೋ ಅನೇಕ ವಿಧದಲ್ಲಿ ರೈತರಿಗೆ ಸಹಾಯಮಾಡಬೇಕೆಂದು ಅನೇಕ ಯೋಜನೆ ಮಾಡುತ್ತೀರಿ, ಅನೇಕ ವಿಧದಲ್ಲಿ ಸಹಾಯ ಮಾಡ

(ಶ್ರೀ ಡಿ. ದೇವರಾಜ ಅರಸ್.)

ಬೇಕೆಂದು ಹೇಳುತ್ತೀರಿ. ಆದರೆ ಈ ಸಹಾಯ ವೆಲ್ಲಾ ಸರಕಾರದಲ್ಲಿ, ನೇರವಾಗಿ, ಸುಲಭವಾಗಿ ರೈತರಿಗೆ ಒದಗುವ ಹಾಗೆ ಮಾಡಬೇಕಾದ್ದು ಮುಖ್ಯ ಕರ್ತವ್ಯ. ಇದನ್ನು ಯಾವ ರೀತಿ ಮಾಡಬೇಕೆಂದು ತೀರ್ವಾಲೋಚನೆ ಮಾಡಿ ಸುಲಭವಾಗಿ ದೊರೆಯುವ ಹಾಗೆ ಏರ್ಪಾಡು ಮಾಡಬೇಕಾದದ್ದು ನಿಮ್ಮ ಕರ್ತವ್ಯ. ತಾವು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಮತ್ತು ತಕಾವಿ ಸಾಲಗಳನ್ನು ಹೋದ ಸಲಕ್ಕಿಂತ ಈ ಸಲ ಕಡಮೆಯಾಗಿ ಒದಗಿಸಿದ್ದೀರಿ. ತಕಾವಿ ಸಾಲ ಬಡ್ಜೆಟ್ ಎಸ್ಟಿಮೇಟ್ ಪ್ರಕಾರ 1953-54ನೆಯ ಸಾಲಿನಲ್ಲಿ 25 ಲಕ್ಷ ರೂಪಾಯಿಗಳಿದ್ದುದನ್ನು ಈಗ 1954-55ರಲ್ಲಿ 7 ಲಕ್ಷ ರೂಪಾಯಿಗಳಿಗೆ ಇಳಿಸಿದ್ದೀರಿ. ರಿವೈಜ್ಡ್ ಎಸ್ಟಿಮೇಟ್‌ನಲ್ಲಿ 20 ಲಕ್ಷ ರೂಪಾಯಿಗಳಿವೆ. ಇದಕ್ಕೆ ಗಮನ ಕೊಟ್ಟು ಹೆಚ್ಚಾಗಿ ಒದಗಿಸಲು ಅವಕಾಶ ಮಾಡಬೇಕು. ಇದು ರೈತರಿಗೆ ನೇರವಾಗಿ ದೊರೆಯ ತಕ್ಕದ್ದು ಮತ್ತು ಅವರ ತೊಂದರೆಯನ್ನು ತಾತ್ಕಾಲಿಕ ವಾಗಿ ನಿವಾರಣೆ ಮಾಡುವ ಒಂದು ಬಾಬು ಆಗಿರು ವುದರಿಂದ ಇದಕ್ಕೆ ಹೆಚ್ಚಾಗಿ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಸೆಂಟ್ರಲ್ ಕಾಪೊರೇಷನ್, ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್ ಮಾಡಿ ತನ್ಮೂಲಕ ಎಲ್ಲಾ ತಾಲ್ಲೂಕುಗಳಲ್ಲೂ ಮತ್ತು ಡಿಸ್ಟ್ರಿಕ್ಟುಗಳಲ್ಲೂ ಸುಲಭವಾಗಿ ಸಾಲ ದೊರೆಯುವ ರೀತಿಯಲ್ಲಿ ರೈತರಿಗೆ ಅವಕಾಶ ಮಾಡಬೇಕು ಎಂದು ಹೇಳಿ ಈ ಡಿಮ್ಯಾಂಡ್ ಮನವಿಯನ್ನು ಸಮರ್ಥನೆ ಮಾಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು.—ಮೂಡಿಗೆರೆ).—ರೈತರ ವಿಷಯದಲ್ಲಿ ಮಾತನಾಡುತ್ತಾ ಕೆಲವು ಅಂಶಗಳನ್ನು ತಿಳಿಸಲಿಚ್ಛಿಸುತ್ತೇನೆ. ಮೊದಲ ನೆಯದಾಗಿ ಏಲಕ್ಕಿ ಬೆಳೆಯುವ ರೈತನ ವಿಚಾರದಲ್ಲಿ ಒಂದೆರಡು ಮಾತನ್ನಾಡಲು ಆಶಿಸುತ್ತೇನೆ. ಅವರಿಗೆ ಸರಿಯಾದ ಮಾರ್ಕೆಟ್ಟಿಲ್ಲ. ಏಲಕ್ಕಿ ಬೆಳೆದು, ಅದನ್ನು ಒಣಗಿಸಿ ಮಂಡಿಯವರಿಗೆ ಕೊಡುತ್ತಾರೆ. ಹಾಗೆ ಕೊಡುವಾಗ ಮಂಡಿಯವರಿಗೆ ಅಗತ್ಯವಿರುವುದಿಲ್ಲ, ರೈತರಿಗೆ ಹಣದ ದರದು ಹೆಚ್ಚಾಗಿರುತ್ತದೆ. ಆದ್ದರಿಂದ ಅಂಥ ಸಂದರ್ಭದಲ್ಲಿ 50 ರೂಪಾಯಿ ಬೆಲೆಬಾಳುವ ಪದಾರ್ಥವನ್ನು 20 ರೂಪಾಯಿಗಳಿಗೆ ತೆಗೆದುಕೊಳ್ಳುತ್ತಾರೆ. ಇದರಿಂದ ರೈತರಿಗೆ ಅನುಕೂಲ ದೊರೆಯುವ ಹಾಗಿಲ್ಲ. ರೈತರಿಗೆ ಸಾಲ ಸಿಕ್ಕದೆ ಅವರು ಈ ರೀತಿ ಕಷ್ಟನಷ್ಟಗಳನ್ನನುಭವಿಸಬೇಕಾಗಿದೆ. ಮೂಡಿಗೆರೆ ತಾಲ್ಲೂಕಿನಲ್ಲಿ ಏಲಕ್ಕಿ ಹೆಚ್ಚಾಗಿ ಬೆಳೆಯುತ್ತಿತ್ತು. ಅದು ಕಾರಣಾಂತರದಿಂದ ಕಡಮೆಯಾಗಿದೆ. ಈಗ ಅವರಿಗೆ ಸಾಲ ಸಿಕ್ಕುವುದಿಲ್ಲ. ಅದನ್ನು ಬೆಳೆಯುವವರು ಮಂಡಿಗಳಲ್ಲಿ ಮತ್ತು ಬೇರೆ ಕಡೆಗಳಲ್ಲಿ ಸಾಲ ತೆಗೆದುಕೊಂಡು ಒದ್ದಾಡುತ್ತಿದ್ದಾರೆ. ಹೀಗಾಗಿ ಏಲಕ್ಕಿ ಬೆಳೆಯುವವರ ಸ್ಥಿತಿ ಕನಿಷ್ಠ ದರ್ಜೆಗಿಳಿದಿದೆ. ಮೂಡಿಗೆರೆ ಮತ್ತು ನಕಲೇಶಪುರಗಳಲ್ಲಿ ಹೋದ ವರ್ಷ 60 ಸಾವಿರ ಮಣ ಏಲಕ್ಕಿ ಆಗುತ್ತಿದ್ದುದಕ್ಕೆ ಈಗ ಈ ವರ್ಷ 6 ಸಾವಿರ ಮಣ ಆಗುತ್ತಿದೆ. ಈ ಬೆಳೆ ಹೀಗೆ ಕಡಮೆಯಾಗಲು ಕಾರಣವೇನೆಂಬುದನ್ನು ತಿಳಿಯಲು ಮತ್ತು ಅದಕ್ಕೇನಾದರೂ ರೋಗ ಬಂದಿದೆಯೆ ಎಂಬು ದನ್ನು ಪರಿಶೀಲಿಸಲು ಮೂಡಿಗೆರೆಯಲ್ಲಿ ಒಂದು ರಿಸರ್ಚ್ ಸ್ಪೆಷಲ್ ಮಾಡಿ ಏಲಕ್ಕಿ ಬೆಳೆಯುವ ರೈತರಿಗೆ ಸಹಾಯ ನೀಡಬೇಕು. ನಮ್ಮಲ್ಲಿ ಆಗಿರುವ ಏಲಕ್ಕಿ ಬೆಳೆಗೆ ಹೊರದೇಶದಲ್ಲಿ ಮಾರ್ಕೆಟ್ಟಿಲ್ಲ. ಡಾ॥ ಕೋಲ್ಮನ್‌ರವರಿದ್ದಾಗ ಈ ವಿಚಾರದಲ್ಲಿ ಒಂದು ಮಾತು ಹೇಳಿದ್ದರು. ಅಮೆರಿಕಾದಲ್ಲಿ ಒಂದು ಕಡೆ ಒಬ್ಬ ಸ್ನೇಹಿತನಿಗೆ ಯಾರೋ ಒಂದು ಏಲಕ್ಕಿಕಾಯಿ ಕೊಟ್ಟರಂತೆ. ಬಂದ ಮೇಲೆ ಹೆಂಡತಿ ಅದೇನೆಂದು ಕೇಳಿ ತಿಳಿಯದೆ ಅದು ವಿಷವೆಂದು ತಿಳಿದು ಪರೀಕ್ಷಿಸಲು ಟೆಸ್ಟಿಂಗ್ ಲ್ಯಾಬೊರೇಟರಿಯಲ್ಲಿ ಪರೀಕ್ಷೆ ಮಾಡಿದರಂತೆ. ಆಗ ಏಲಕ್ಕಿ ಎಂದು ಹೇಳಿದರಂತೆ. ಹೀಗೆ ಕೆಲವರಿಗೆ ಏಲಕ್ಕಿಯ ಉಪಯೋಗವೇ ಗೊತ್ತಿಲ್ಲ. ನಮ್ಮ ಟ್ರೇಡ್ ಏಜೆಂಟರು ಮತ್ತು ಕಮಿಷನರು ಯಾರಿದ್ದಾರೋ ಅವರೇಕೆ ಇದನ್ನು ಹೊರದೇಶಗಳಲ್ಲಿ ಪ್ರಚಾರಮಾಡ ಬಾರದು? ಈಗ ಇದರ ಪ್ರಚಾರವಿಲ್ಲದೆ ಇದಕ್ಕೆ ಹೊರ ದೇಶದಲ್ಲಿ ಮಾರ್ಕೆಟ್ ಇಲ್ಲವಾಗಿದೆ. ಈ ಕಾರಣದಿಂದ ಮತ್ತು ಹಣ ಸಹಾಯವಿಲ್ಲದಿರುವುದರಿಂದ ಮತ್ತು ರೋಗದ ದೆಸೆಯಿಂದ ಏಲಕ್ಕಿ ಬೆಳೆಗೆ ಹೀಗೆ ನಷ್ಟ ವಾಗಿದೆ. ಈ ನಷ್ಟವನ್ನು ತಪ್ಪಿಸಲು ನಮ್ಮ ದೇಶದಲ್ಲಿ ರೈತರಿಗೆ ಸಾಕಾದಷ್ಟು ಸಹಾಯ ಮಾಡಬೇಕು.

ರೈತರ ವಿಷಯದಲ್ಲಿ ಇನ್ನೊಂದು ಮಾತು. ಶ್ರೀ ಗೋಪಾಲಗೌಡರು ಪೋಲೀಸಿನವರು, ವಿದ್ಯುಚ್ಛಕ್ತಿ ಇಲಾಖೆ ನೌಕರರು, ಉಪಾಧ್ಯಾಯರು ಮುಂತಾದ ವರಿಗೆ ಅನ್ಯಾಯವಾಗಿದೆ, ಅವರಿಗೆ ಸಹಾಯಮಾಡ ಬೇಕೆಂದು ಹೇಳಿದರು. ಆದರೆ ಮೂಲೆಯಲ್ಲಿರುವ ಬಡ ರೈತರನ್ನು ಕೇಳುವವರೇ ಇಲ್ಲ. ಅವರಿಗೆ ಸಾಲ ಕೊಟ್ಟರೆ ವಾಪಸು ಕೊಡುತ್ತಾರೆ. ರೈತರೆಂದೂ ಸಾಲ ತಿಂದುಹಾಕುವುದಿಲ್ಲ. ಅವರೂ ಇತರರಂತೆ ನಮ್ಮ ದೇಶದಲ್ಲೇ ಹುಟ್ಟಿಬೆಳೆದವರು. ಪ್ರತಿಯೊಬ್ಬ ರೈತರೂ ವಿಶೇಷವಾಗಿ ಸಾಲಮಾಡಿ ಆಸ್ತಿಯನ್ನು ಅಡವಿಟ್ಟಿದ್ದಾರೆ. ಅವರು ಸ್ವತಂತ್ರರಾಗಿಯೂ, ಅನು ಕೂಲಸ್ಥರಾಗಿಯೂ ಇಲ್ಲ. ಸರ್ಕಾರದವರೇನೋ ತಕಾವಿ ಸಾಲ, ಅಡಮಾನದ ಬ್ಯಾಂಕಿನ ಸಾಲ ಮುಂತಾದುವನ್ನು ಕೊಡುತ್ತಾರೆ. ಆದರೆ ಅದು ಸಕಾಲದಲ್ಲಿ ದೊರೆಯುವುದಿಲ್ಲ. ಬೀಜ ಹಾಕುವಾಗ ಸಾಲ ಕೇಳಿದರೆ ಕೊಯ್ಯುವಾಗ ಸಾಲ ಸಿಕ್ಕುತ್ತದೆ, ಇಂಥ ಕಷ್ಟವಿದೆ. ಅಡಮಾನದ ಬ್ಯಾಂಕಿನಿಂದ ಸಾಲ ಮಂಜೂರಾಗಬೇಕಾದರೆ 10 ವರ್ಷಗಳು ಬೇಕು. ಈ ಸಾಲ ಮೊದಲಂದಲೂ ಬುದ್ಧಿವಂತರು, ಶಾಸನಸಭಾ ಸದಸ್ಯರು, ಡೈರೆಕ್ಟರನ್ನು ನೋಡಿ ಶಿಫಾರ್ಸು ಪಡೆಯು ವವರು ಮುಂತಾದವರಿಗೆ ಸಿಕ್ಕುತ್ತಿದೆಯೇ ವಿನಾ ಸಾಮಾನ್ಯ ರೈತರಿಗೆ ಸಿಕ್ಕುತ್ತಿಲ್ಲ. ದೊಡ್ಡವರಿಗೆ ಬೇಕಾದರೆ ಆಸ್ತಿ 4 ಸಾವಿರ ರೂಪಾಯಿಗಳ ಬೆಲೆ ಬಾಳುವುದಾಗಿದ್ದರೂ ಅದರ ಆಧಾರದ ಮೇಲೆ ಶಿಫಾರ್ಸಿನ ಮೇಲೆ 20 ಸಾವಿರ ರೂಪಾಯಿಗಳ ಸಾಲ ಪಡೆದಿರುವ ನಿದರ್ಶನಗಳಿವೆ. ಆದ್ದರಿಂದ ರೈತರ ವಿಚಾರದಲ್ಲಿ ಸರ್ಕಾರ ಗಮನಕೊಟ್ಟು ಅವರಿಗೆ ಹೆಚ್ಚು ಸಹಾಯಮಾಡಬೇಕು; ಸಾಲ ವಾಪಸು ಬರುತ್ತದೆ. ಈಗ ರೈತರು ಸರ್ಕಾರದಿಂದ ಸಾಲ ಸಿಕ್ಕದೆ ಶೇಕಡ 20 ರಿಂದ 30 ರೂಪಾಯಿಗಳವರೆಗೆ ಬಡ್ಡಿಕೊಟ್ಟು ಸಾಲ ಪಡೆದು ತಮ್ಮ ಆಸ್ತಿಗಳನ್ನು ಹಾಳುಮಾಡಿ ಕೊಂಡಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಮದ್ರಾಸು ಸರ್ಕಾರದವರು ಆಕ್ಟ್ ಮಾಡಿರುವ ಹಾಗೆ Moratorium Actನ್ನು ಜಾರಿಗೆ ತರಬೇಕು ಎರಡು ಮೂರು ವರ್ಷ ರೈತರಿಗೆ ಹಿಂಸೆಮಾಡದ ಹಾಗೆ ಮಾಡ ಬೇಕು; ಇಲ್ಲದಿದ್ದರೆ ರೈತರು ಹಾಳಾಗುತ್ತಾರೆ. ಕೆಲ ವರು ರೈತರು ರೂಪಾಯಿಗೆ ಎರಡು ಸೇರು ರಾಗಿ ಮಾರುತ್ತಿದ್ದಾರೆಂದು ಹೇಳಿದರು. ಆದರೆ ಹಿಂದೆ ಪಲ್ಲಾಕ್ಕೆ 10 ರೂಪಾಯಿಗಳಂತೆ ರೈತರಿಂದ ತೆಗೆದು ಕೊಂಡು ಅದನ್ನು ಈಗ ಪಲ್ಲಾಕ್ಕೆ 30 ರೂಪಾಯಿ ಗಳಂತೆ ಮಾರುತ್ತಿದ್ದಾರೆ. ರೈತರು ಹಿಂದೆ ದುಡ್ಡಿನ ತಾಪತ್ರಯಕ್ಕೆ ಕಡಮೆ ಬೆಲೆಗೆ ಮಾರಿ ಈಗ ಹೆಚ್ಚು ಬೆಲೆಗೆ ಅವರೇ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ

ರೈತರ ವಿಷಯದಲ್ಲಿ ಸರ್ಕಾರ ನಿಗಾ ತೆಗೆದುಕೊಳ್ಳಬೇಕೆಂದು ಹೇಳಿ ಈ ಡಿಮ್ಯಾಂಡನ್ನು ಸಮರ್ಥನೆ ಮಾಡುತ್ತೇನೆ.

*Sri M. PALANIYAPPAN (Ulsoor).—Sir, Government is giving enormous money to the Bangalore Trust Board for putting new lay-outs and to enlarge the City of Bangalore. But I see no lay-out whatsoever in Civil Station ever since the inception of this Trust Board. I understand that the Trust Board has more than 20 lakhs of rupees on hand being the value of sites sold and on account of the model houses. With this amount on hand the Trust Board may bring in new lay-outs in Civil Station. Sir, Civil Station was considered to be a paradise of the pensioners. Today it is nothing but a labour area on account of the establishment of big industries. The importance of the place has increased now and the Trust Board has to pay more attention to these areas. On the contrary they think of improving other places anticipating future income for the Trust Board. For example, the Jayanagar extension.

Sri K. HANUMANTHAIYA (Chief Minister).—Sir, in one sentence the Hon'ble Member can tell us where he wants this improvement to be made in Civil Station. (*Laughter*).

Sri M. PALANIYAPPAN:—I may straightaway say Austin Town and Richards Town. Then, I just like to bring to the notice of this House and of the Government that there is only one Co-operative Bank in Civil Station and it is now in a dying condition because all the people who had deposited so much of money now want to withdraw because the period is over. That is the only Bank which was of so much help to the middle class people, by way of granting loans. I request Government to grant at least fifty thousand rupees to this Bank.

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಅಧ್ಯಕ್ಷರೇ, ಒಂದು ದೇಶದ ಕಲ್ಯಾಣವಾಗಬೇಕಾದರೆ ಹಳ್ಳಿಗಳು ಉದ್ಧಾರವಾಗಬೇಕು ಎಂದು ನಮ್ಮ ನಾಡಿನ ಕವಿ ಹೇಳಿದ್ದಾರೆ. ಈಗ ಬೆಂಗಳೂರು ನಗರಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಈ ನಗರದಲ್ಲಿ ಈಗ ಮುನಿಸಿಪಾಲಿಟಿ ಹೋಗಿ ಕಾರ್ಪೊರೇಷನ್ ಬಂದಿದೆ. ಇಲ್ಲಿ ಸ್ವತಂತ್ರಪಾಳ್ಯ, ಲಕ್ಷ್ಮೀನಾರಾಯಣಪುರ, ಗಾಂಧಿ ಗ್ರಾಮ, ಪಿಟ್ ಕಾಲೊನಿ, ಅರ್ಜುನ ಕಾಲೊನಿ ಮುಂತಾದುವು ಬೆಂಗಳೂರು ನಗರ ಹುಟ್ಟುವುದಕ್ಕೆ ಮುಂಚಿನಿಂದಲೂ ಇವೆ. ಮಾನ್ಯ ಸದಸ್ಯರು ರೈತರಮೇಲೆ ಕರುಣೆಯಿಡಬೇಕೆಂದು ಹೇಳಿದಹಾಗೆ ಈ ಪ್ರದೇಶಗಳಲ್ಲಿರುವ ಜನರ ಸ್ಥಿತಿಗಳನ್ನು ಗಮನಿಸಿ ಅವರಿಗೆ ತಕ್ಕ ಸೌಕರ್ಯಗಳನ್ನೊದಗಿಸಬೇಕು. ಮೇಲ್ಕಂಡ ನಗರಗಳಲ್ಲಿ ತೀರ ಬಡವರು, ಹರಿಜನರು ವಿಶೇಷವಾಗಿ ವಾಸಮಾಡುತ್ತಿದ್ದಾರೆ. ಅವರಿಗಾಗಿ ಸರ್ಕಾರದವರು ಅಲ್ಲಿ ನೀರು, ದೀಪ, ರಸ್ತೆ ಮುಂತಾದ ಸೌಕರ್ಯಗಳನ್ನು ಕಲ್ಪಿಸಲು ಅಗತ್ಯವಾದ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕು. ವೈದ್ಯಕೀಯ ಸೌಕರ್ಯವೂ ಸಹ ಅಗತ್ಯವಾಗಿದೆ. ಬೆಂಗಳೂರಿನಲ್ಲಿ ಮೊಟ್ಟ ಮೊದಲು ಖಾಯಿಲೆ ಬರಬೇಕಾದರೆ ಈ ಪ್ರದೇಶಗಳಲ್ಲಿ ಪ್ರಾರಂಭವಾಗುತ್ತದೆ. ಕಾಲರ, ಪ್ಲೇಗು ಮುಂತಾದುವು ಇಲ್ಲಿ ಹುಟ್ಟುತ್ತವೆ. ಈ ಪ್ರದೇಶ ಆರೋಗ್ಯಕರವಾದ ನೆಲೆಯಾಗಿಲ್ಲ. ಇಲಿಗಳು ಇಲ್ಲಿ ಸಂತೋಷದಿಂದ ವಾಸ ಮಾಡಿಕೊಂಡಿವೆ, ಅವುಗಳ ಆನಂದಕ್ಕೆ ಪಾರವೇ ಇಲ್ಲ ಎಂದು ಹೇಳಬಹುದು. ಅಂದಮೇಲೆ ಈ ಪ್ರದೇಶದ ಸ್ಥಿತಿ ಎಲ್ಲರಿಗೂ ಮನವರಿಕೆಯಾಗಬಹುದು. ಪ್ರಜಾ ಪ್ರಭುತ್ವ ಬಂದರೂ ಸಹ ಇಲ್ಲಿನ ಜನರ ಕುಂದುಕೊರತೆ ನಿವಾರಣೆಯಾಗಿಲ್ಲ, ಅವರು ಉತ್ತಮ ಸ್ಥಿತಿಗೆ ಬರಲು ಅವಕಾಶ ಇಲ್ಲಿಯವರೆಗೂ ಆಗಿಲ್ಲ. ಅವರಿಗೆ ನ್ಯಾಯ ದೊರೆತಿಲ್ಲ. ಹಿಂದೆ ಇಲ್ಲಿಗೆ ಸರ್ಕಾರದವರು ದಯ ಮಾಡಿಸಿ ತಮ್ಮ ಅಮೃತ ಹಸ್ತದಿಂದ ಭಾಪಿ ನಗರಕ್ಕೆ ಸಹಾಯಮಾಡಿದರು. ಆರೋಗ್ಯ ಸಚಿವರಿಗೂ ಮತ್ತು ಮುಖ್ಯ ಮಂತ್ರಿಗಳಿಗೂ ಆ ಕೀರ್ತಿಯಿದೆ. ಈಗಲೂ ಅದೇ ರೀತಿಯಲ್ಲಿ ಅಭಿಮಾನವಿಟ್ಟು ಮಾನ್ಯ ಮಂತ್ರಿಗಳು ಮುತವರ್ಜಿ ವಹಿಸಬೇಕು.

4-30 P.M.

* ಶ್ರೀ ಟಿ. ನಾಗಪ್ಪ (ತರೀಕೆರೆ).—ಈ ವಿಚಾರದಲ್ಲಿ ನನ್ನ ಗಮನಕ್ಕೆ ಬಂದಿರುವ ಒಂದೆರಡು ಅಂಶಗಳನ್ನು ತಿಳಿಸಲಿಚ್ಛಿಸುತ್ತೇನೆ. ಈಗತಾನೇ ಶ್ರೀಮತಿ ಬಿ. ಎರ್. ಸುಬ್ಬಮ್ಮನವರು ಹೇಳಿದಹಾಗೆ ಏಲಕ್ಕಿ ಬೆಳೆಯುವವರಿಗೆ ಸಹ ಬಹಳ ತೊಂದರೆಯುಂಟಾಗಿದೆ. ಇದೇ ರೀತಿ ಶಿವಮೊಗ್ಗ ಜಿಲ್ಲೆಯಲ್ಲಿ ಅಡಿಕೆ ಮಾರಾಟಗಾರರಿಗೂ ಬಹಳ ತೊಂದರೆಯೊದಗಿದೆ. ಅನೇಕರು ಹಣದ ಮುಗ್ಗಟ್ಟಿನ ಹಿಡಿತಕ್ಕೆ ಸಿಕ್ಕಿಬಿದ್ದು ಮುಂಡಿಯವರಿಂದ ಮುಂಗಡವಾಗಿ ಹಣ ತೆಗೆದುಕೊಂಡು ಅವರಲ್ಲಿ ತಮ್ಮ ದಿನಸಿಯನ್ನೇ ಅಡವಿಡುತ್ತಾರೆ. ಅದನ್ನು ಮಾರಾಟಮಾಡುವ ಸಮಯದಲ್ಲಿ ಮಾರಾಟಕ್ಕೆ ಅವಕಾಶವಿಲ್ಲದೆ ಇಷ್ಟಾನುಸಾರ ಮಾರಾಟಮಾಡಿ ಬರತಕ್ಕ ಹಣಕ್ಕೇ ಪೋನ ಬಿದ್ದು ತೊಂದರೆಗೆ ಒಳಗಾಗುತ್ತಾರೆ. ಅನೇಕರು ತಮ್ಮ ಒಡವೆವಸ್ತುಗಳನ್ನು ಸಹ ಅಡವಿಟ್ಟುಕೊಂಡು ಬಹಳ ಕಷ್ಟದಿಂದ ಜೀವನ ಸಾಗಿಸುತ್ತಿದ್ದಾರೆ. ಸರ್ಕಾರದವರು ಇವರಿಗೆ ಸುಲಭ ಕಂತಿನಲ್ಲಿ ಯಥೇಚ್ಛವಾಗಿ ಸಾಲ ದೊರಕುವಂತೆ ಸೌಕರ್ಯವನ್ನು ಕಲ್ಪಿಸಿಕೊಡಬೇಕು. ಇಷ್ಟೇ ಅಲ್ಲದೆ ಇವರ ಬೆಳೆಗೆ ಅನುಕೂಲವಾಗುವ ಹಾಗೆ ನೀರಿನ ಸರಬರಾಯಿಯನ್ನು ಮಾಡಬೇಕು. ಸರ್ಕಾರದವರು ನಮ್ಮ ಮಲೆನಾಡು ರೈತರ ಹಿತದೃಷ್ಟಿಯ ಕಡೆಗೆ ಹೆಚ್ಚಿನ ಗಮನ ಕೊಟ್ಟು ಅವರಿಗೆ ಎಲ್ಲ ವಿಧವಾದ ಸೌಕರ್ಯವನ್ನೂ ಒದಗಿಸಿಕೊಟ್ಟು ಅವರ ಏಳಿಗೆಯೇ ದೇಶದ ಏಳಿಗೆ ಎಂದು ಸಮಸ್ತ ನೆರವನ್ನೂ ನೀಡುತ್ತಾರೆಂದು ನಂಬುತ್ತೇನೆ.

*ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ವ್ಯವಸಾಯ ಮಾಡತಕ್ಕಂಥ ರೈತರಿಗೆ ಪ್ರತಿ ವರ್ಷವೂ

(ಶ್ರೀ ಎಚ್. ಕೆ. ಸಿದ್ದಯ್ಯ).

ನಾನಾ ಬಾಬುಗಳಲ್ಲಿ ಹಣವನ್ನು ಒದಗಿಸುತ್ತಿದ್ದಾರೆ. ಅದೇ ರೀತಿ ಈ ಸಲವೂ ಸಹ ಘನ ಸರ್ಕಾರದವರು ಒಹುಮಟ್ಟಿಗೆ ಸಹಾಯ ನೀಡಿದ್ದಾರೆ. ಅವರು ಹಾಗೆ ಸರವು ನೀಡದೆ ಇದ್ದಿದ್ದರೆ ಈಗಾಗಲೇ ಹಲವು ಮಂದಿ ಬಡರೈತರು ಕಷ್ಟಕ್ಕೆ ಈಡಾಗಿ ನಷ್ಟ ಹೊಂದುತ್ತಿದ್ದರು. ಆದರೂ ಈಗ ಲೆಕ್ಕಾಚಾರ ಹಾಕಿದರೆ ಸರ್ಕಾರದವರು ನೀಡಿರುವ ಹಣ ಸಹಾಯದ ಪೈಕಿ ಮೈಸೂರು ಸಂಸ್ಥಾನದಲ್ಲಿರುವ ಹರಿಜನರಿಗೆ ದೊರಕಿರುವ ಸಹಾಯ ಬಹಳ ಕಡಮೆಯೆಂಬುದು ಗೊತ್ತಾಗುತ್ತದೆ. ಸರ್ಕಾರದವರೇನೋ ಸಮಸ್ತರಿಗೂ ನ್ಯಾಯವಾದ ರೀತಿಯಲ್ಲಿ ಒಬ್ಬರಿಗೊಬ್ಬರಿಗೆ ಯಾವ ತಾರತಮ್ಯವೂ ಇಲ್ಲದಂತೆ ಸಾಲ ದೊರಕುವ ವ್ಯವಸ್ಥೆ ಮಾಡಿದ್ದರೂ, ಅದನ್ನು ಕಾರ್ಯರೂಪಕ್ಕೆ ತರುವ ಅವರ ಕೈಕೆಳಗಿನ ಅಧಿಕಾರಿಗಳು ಇದನ್ನು ಬೇರೆ ರೀತಿಯಲ್ಲಿ ವ್ಯವಸ್ಥೆಗೊಳಿಸಿರುತ್ತಾರೆ. ಉದಾಹರಣೆಗಾಗಿ, ತಾವು ಅಡಮಾನದ ಬ್ಯಾಂಕಿನ ಸಾಲ ಹಂಚಿಕೆಯ ಪುಸ್ತಕ ತರಿಸಿ ನೋಡಿದರೆ ಅಲ್ಲಿ ಸಾಲವಾಗಿ ಕೊಟ್ಟಿರುವ 3,000, 4,000, 5,000 ರೂಪಾಯಿಗಳು ಬೆಳೆಯತಕ್ಕವರಿಗೆ ದೊರಕಿಲ್ಲ. ಅನುಕೂಲಸ್ಥರಿಗೇ ದೊರಕಿದೆ. ಈ ದಿನ ಕಷ್ಟಪಟ್ಟು ವ್ಯವಸಾಯ ಮಾಡುತ್ತಿರುವ ಬಡ ರೈತರಿಗೆ ಸಲೀಸಾಗಿ ಸಾಲ ದೊರಕುತ್ತಿಲ್ಲ. ಈಗಲಾದರೂ ಸರ್ಕಾರದವರು ಇವರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಇವರಿಗೆ ಸುಲಭವಾಗಿ ಸಾಲ ಸಿಕ್ಕುವ ವ್ಯವಸ್ಥೆ ಮಾಡುತ್ತಾರೆಂದು ನಂಬಿದ್ದೇನೆ.

ಇನ್ನೊಂದು ವಿಚಾರ. ಈ ಅಡಮಾನದ ಬ್ಯಾಂಕಿನಲ್ಲಿ ನೌಕರರನೇಕರು ಲಂಚಕ್ಕೆ ಒಳಗಾಗಿ ಯಾರು ಇದರ ಸೌಲಭ್ಯ ಕಲ್ಪಿಸಿ ಕೊಡುತ್ತಾರೋ ಅವರಿಗೆ ಮಾತ್ರ ಸಾಲ ದೊರಕುವ ವ್ಯವಸ್ಥೆ ಮಾಡುತ್ತಾರೆ. ಅಂದ ಮೇಲೆ ಬಡ ರೈತರಿಗೆ ಇಂಥ ಅಡಮಾನದ ಬ್ಯಾಂಕಿನಿಂದ ಆಗುವ ಪ್ರಯೋಜನವಾದರೂ ಏನು ? ಯಾರಿಗೆ ತಕಾವಿ ಸಾಲದ ಅವಶ್ಯಕತೆ ತುರ್ತಾಗಿರುತ್ತದೆಯೋ, ಯಾರು ನಿರ್ಗತಿಕರಾಗಿ ಇದನ್ನೇ ನಂಬಿಕೊಂಡು ಈ ಸಹಾಯವನ್ನೇ ಅಪೇಕ್ಷಿಸುತ್ತಿರುತ್ತಾರೋ ಅಂಥವರಿಗೆ ಈ ಸಹಾಯ ದೊರಕದಿದ್ದರೆ ಪ್ರಯೋಜನವೇನು ? ಈ ತಕಾವಿ ಸಾಲವನ್ನು ಹರಿಜನರಿಗೆ amelioration fundನಿಂದ ಬೇರೆಯಾಗಿ ಕೊಡುವ ಹಾಗೆ. ಇದನ್ನು ಬೇರೆಯಾಗಿ ಒದಗಿಸುವ ಸೌಲಭ್ಯ ಕಲ್ಪಿಸುವುದು ಸೂಕ್ತ. ಆಗ ಹರಿಜನರಿಗೆ ಅನುಕೂಲವಾಗಿ ಈ ಸಾಲ ದೊರಕುತ್ತದೆ, ಇಲ್ಲದಿದ್ದರೆ ಖಂಡಿತವಾಗಿಯೂ ಸಿಕ್ಕುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ಮೈಸೂರು, ಬೆಂಗಳೂರು, ಚಿತ್ರದುರ್ಗ ಈ ಕಡೆಗಳಲ್ಲಿರುವ ಹರಿಜನರಿಗೆ ಒಂದು ವೇಳೆ ಈ ಸಾಲ ಸಿಕ್ಕಿದರೂ ಸಿಕ್ಕಬಹುದು. ಹಾನನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಲೆಕ್ಕಾಚಾರದ ಪ್ರಕಾರ ಸಿಕ್ಕಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಹರಿಜನರಿಗೆ ಈ ಬಗ್ಗೆ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡಬೇಕಾದುದು ಅತ್ಯಗತ್ಯವೆಂದು ಸೂಚಿಸುತ್ತೇನೆ.

ನಮ್ಮ ಸರ್ಕಾರದವರು ನಮಗೆ ಖಂಡಿತವಾಗಿಯೂ ಸರಿಯಾದ ರೀತಿಯಲ್ಲಿ ಸಹಾಯ ಮಾಡಿದಾರೆ, ನಮಗೆ ಅನುಕೂಲವಾಗುತ್ತಿದೆ. ಅದೇ ರೀತಿ ಇನ್ನೂ ಮುಂದು ವರಿಯುವುದರಲ್ಲಿ ನಮಗೆ ಏನೂ ಭಯವಿಲ್ಲ. ಇಡೀ ಸಂಸ್ಥಾನದಲ್ಲಿರತಕ್ಕ 19 ಲಕ್ಷ ಹರಿಜನರೂ ತಮ್ಮ ಕೀರ್ತಿಯನ್ನು ಕೊಂಡಾಡುವುದಕ್ಕೆ ಸಿದ್ಧವಾಗಿದ್ದಾರೆ. ಇದನ್ನು ಬಹಳ ದಿವಸದಿಂದ ಹೇಳಬೇಕೆಂದಿದ್ದೆ, ನನಗೆ ಅವಕಾಶ ಸಿಕ್ಕದೇ ಸಿಕ್ಕದೇ ಅಧ್ಯಕ್ಷರು ದೊಡ್ಡ ಮನಸ್ಸು ಮಾಡಿ ಅವಕಾಶ ಕೊಟ್ಟರು. ಈ ಸಂದರ್ಭದಲ್ಲಿ ಅದನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಸಾಲಗಳನ್ನು ಕೊಡುವ ವಿಚಾರದಲ್ಲಿ ಅನೇಕರು ಮಾತನಾಡಿದ್ದಾರೆ. ಈ ವಿಚಾರದಲ್ಲಿ ನಾನು ಮಾತನಾಡಬಾರದು ಎಂದು ಇದ್ದೆ. ಶ್ರೀಮಾನ್ ಸಿದ್ದಯ್ಯನವರು ಮಾತನಾಡಿದ್ದರ ಮೇರೆ ನಾನು ಒಂದೆರಡು ಸೂಚನೆಗಳನ್ನು ಕೊಡ ಬೇಕೆಂದಿದ್ದೇನೆ. ಈ ಸಾಲಗಳು ಬಡವರಿಗೆ ದೊರೆಯದೇ ಇರುವುದಕ್ಕೆ ಕಾರಣ ಏನೆಂಬುದನ್ನು ತಿಳಿದು ಕೊಳ್ಳಬೇಕಾದದ್ದು ಅಗತ್ಯವಾಗಿದೆ. ಈ ತಕಾವಿ ಸಾಲ ಇತ್ಯಾದಿ ಸಾಲಗಳನ್ನು ತೆಗೆದುಕೊಳ್ಳುವಾಗ ರೂಲ್ಸುಗಳು ಅಡ್ಡಿ ಬರುತ್ತವೆ. ಸಾಲಕ್ಕೆ ಅಡವು ಇಡಬೇಕಾದ ಪ್ರಾಪರ್ಟಿ ಸಾಲ ಕೊಡತಕ್ಕ ಮೊಬಲಗಿಗಿಂತ ಎರಡ ರಷ್ಟು ಇರಬೇಕೆಂಬ ರೂಲ್ಸು ಇರುವುದರಿಂದ ಸಾಲ ಪಡೆಯುವುದಕ್ಕೆ ಅನಾನುಕೂಲವಾಗಿದೆ. ಇದನ್ನು ಸರ್ಕಾರದವರು ಸ್ವಲ್ಪ ಪರಿಶೀಲನೆ ಮಾಡಿ ಅವರು ಕೇಳತಕ್ಕಸಾಲ ಎಷ್ಟಿರುತ್ತದೆಯೋ ಅಷ್ಟು ಮಾತ್ರ ಇದ್ದರೆ ಸಾಕು ಎಂಬುದಾಗಿ ತಿದ್ದುಪಡಿ ಮಾಡಿದರೆ ಬಡವರಿಗೆ ಸಾಲ ದೊರೆಯುವಂತೆ ಆಗುತ್ತದೆ.

ಇನ್ನೊಂದು ವಿಷಯ ಎಂದರೆ ಕೋ-ಆಪರೇಟಿವ್ ಸೊಸೈಟಿಗಳ ಹೆಡ್‌ನಲ್ಲಿ 1 ಲಕ್ಷ 93 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆಯಾ ಸೊಸೈಟಿಗಳ ಮೂಲಕ ಸಾಲ ಕೊಡುವುದರಿಂದ ಸೊಸೈಟಿಯ ಮೇಲೆ ಜವಾಬ್ದಾರಿ ಇರುತ್ತದೆ. ಅವರು ಆಯಾ ಸದಸ್ಯರಿಂದ ವಸೂಲು ಮಾಡಿಕೊಳ್ಳುತ್ತಾರೆ. ಸರ್ಕಾರಿ ಹಣಕ್ಕೆ ಭದ್ರತೆ ಇರುತ್ತದೆ. ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಸಂಬಂಧಪಟ್ಟ 150 ಸೊಸೈಟಿಗಳಿವೆ. ಆ ಸೊಸೈಟಿಗಳು ಎಲ್ಲೆಲ್ಲಿ ಕೆಲಸ ಮಾಡುತ್ತಿವೆ ಎಂಬ ಸಮಾಚಾರವನ್ನು ತರಿಸಿಕೊಂಡು ಆ ಸೊಸೈಟಿಗಳ ಮೂಲಕ ನಿಮ್ಮ ತರ ಗತಿಯವರಿಗೆ ಸಾಲ ಕೊಟ್ಟರೆ ಶ್ರೀಮಾನ್ ಸಿದ್ದಯ್ಯನವರು ಹೇಳುವಹಾಗೆ ಅವರಿಗೆ ಸಹಾಯ ಮಾಡಿದಹಾಗಾಗುತ್ತದೆ. ಮತ್ತು ಸರ್ಕಾರದವರು ಕೊಟ್ಟ ಸಾಲ ಕೂಡ ಸರಿಯಾದ ರೀತಿಯಲ್ಲಿ ವಸೂಲಾಗುವುದಕ್ಕೆ ಅವಕಾಶವಿರುತ್ತದೆ. ಕೆಲವು ದಿವಸಗಳ ಕೆಳಗೆ ವ್ಯತ್ತ ಪತ್ರಿಕೆಗಳಲ್ಲಿ ಓದಿದೆ. ಕೇಂದ್ರ ಸರ್ಕಾರದವರು ನಿಮ್ಮ ತರಗತಿಯ ಏಳಿಗೆಗೆ 50 ಲಕ್ಷ ರೂಪಾಯಿಗಳನ್ನು ಇದುವರೆಗೂ ಕೊಟ್ಟಿರುವುದಲ್ಲದೆ 30 ಲಕ್ಷ ರೂಪಾಯಿಗಳನ್ನು ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದಾರೆ. ಈ ರೀತಿ ಏಕೆ ಕೊಡಬೇಕೆಂದರೆ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಬೇಕು ಎಂಬುದೇ ಉದ್ದೇಶವಾಗಿದೆ. ತಕಾವಿ ಲೋನು ಮತ್ತು ಇತರ ಲೋನುಗಳನ್ನು ಸೊಸೈಟಿಗಳ ಮುಖಾಂತರ, ಇಲಾಖೆಯ ಮುಖಾಂತರ, ಡಿಪ್ರೆಸ್ಡ್ ಕ್ಲಾಸ್ ಕಮಿಷನರ ಮುಖಾಂತರ ಅವರಿಗೆ ಕೊಡಿಸಿ ಕೊಟ್ಟು ಒಂದು ಗೊತ್ತಾದ ಅವಧಿಯಲ್ಲಿ ವಸೂಲು ಮಾಡಿಕೊಂಡರೆ ಬಹಳ ಪ್ರಯೋಜನವಾಗುತ್ತದೆ. ಆದ್ದರಿಂದ 54-55ನೇ ಸಾಲಿನಲ್ಲಿ ಒದಗಿಸಿರತಕ್ಕ ಹಣ ಸರಿಯಾಗಿ ವಿನಿಯೋಗಿಸಲ್ಪಟ್ಟು ಸಾಲ ದೊರೆಯುವಂತೆ ಮಾಡ ಬೇಕೆಂದು ಹೇಳಿ ಈ ಸಂದರ್ಭದಲ್ಲಿ ತಿಳಿಸುತ್ತೇನೆ.

*ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ನಾನು ಕೈಗಾರಿಕೆಗಳ ಮೇಲೆ ಸಂಬಂಧಪಟ್ಟ ಸಾಲಗಳ ವಿಷಯದಲ್ಲಿ ಎತ್ತಿರತಕ್ಕ ಅಂಕಿ ಅಂಶಗಳ ವಿಚಾರವಾಗಿ ಮಾತ್ರ ಮಾತನಾಡಿ, ವ್ಯವಸಾಯ ಮತ್ತು ಬಾಕಿ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಸಾಲಗಳ

ವಿಚಾರವಾಗಿ ಮಾತನಾಡುವುದಕ್ಕೆ ಸಾಕಾದಷ್ಟು ಕಾಲವನ್ನು ಮಾನ್ಯ ಸ್ನೇಹಿತರಿಗೆ ಬಿಡುತ್ತೇನೆ.

ಕೈಗಾರಿಕೆಗಳ ವಿಚಾರದಲ್ಲಿ ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಹಿಂದೆ ಇದೇ ಅಧಿವೇಶನದಲ್ಲಿ ಮಾನ್ಯ ಸಭೆಯ ಮುಂದೆ ಶ್ರೀಮಾನ್ ಎಸ್. ಕರಿಯಪ್ಪ ನವರ 6ನೆಯ ನಂಬರಿನ ಪ್ರಶ್ನೆ ಬಂದಿದ್ದು ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಆ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತಂದಿದ್ದೇನೆ. ಕಳೆದ 5ವರ್ಷಗಳಲ್ಲಿ ಯಾವ ಯಾವ ಖಾನಗೀ ಕೈಗಾರಿಕೆಗಳವರಿಗೆ ಸರ್ಕಾರ ಸಾಲವನ್ನು ಕೊಟ್ಟಿದೆ, ಎಷ್ಟು ಸಾಲವನ್ನು ಕೊಟ್ಟಿದೆ; 1-3-1953ನೇ ತಾರೀಖಿನವರೆಗೆ ಅವರ ಅಸಲು ಎಷ್ಟಿದೆ, ಬಡ್ಡಿ ಮತ್ತು compound interest ಎಷ್ಟು ಬಾಕಿ ಇದೆ ಎಂಬ ಅಂಶಗಳನ್ನು ಒದಗಿಸಿದ್ದೇನೆ. ನನ್ನಲ್ಲಿರತಕ್ಕ ಅಂಕಿಅಂಶಗಳ ಪ್ರಕಾರ—ಪುನಃ ಈ ಸಭೆಯ ಗಮನಕ್ಕೆ ತರಬೇಕಾಗಿದೆ, ಏಕೆಂದರೆ, ಯಾವುದು ಕೊಟ್ಟಿದ್ದೇನೆ ಯಾವುದು ಕೊಟ್ಟಿಲ್ಲ ಎಂಬುದು ಜ್ಞಾಪಕ ಇಲ್ಲದೇ ಇರುವುದರಿಂದ ಅಂಕಿ ಅಂಶಗಳನ್ನೂ ಮತ್ತೆ ಹೇಳುತ್ತೇನೆ—70,95,000 ರೂಪಾಯಿ ಸಾಲ ಕೊಟ್ಟಿದೆ. ಈ ಸಂಸ್ಥೆಗಳಲ್ಲಿ ಇರತಕ್ಕ ಅಸಲು 29,54,000 ರೂಪಾಯಿ, ಬಡ್ಡಿ 1ಲಕ್ಷ 37 ಸಾವಿರ ರೂಪಾಯಿ ಬರಬೇಕಾಗುತ್ತದೆ. ವಸೂಲಿ ಕ್ರಮವನ್ನು ಸರ್ಕಾರದವರು ಕೈಕೊಂಡು ಸೂಕ್ತವಾಗಿ ಮತ್ತು ಸಮರ್ಪಕವಾಗಿ ನಡೆಯುತ್ತಾ ಇದೆ ಎಂಬ ಅಂಶವನ್ನು ಅವರ ಗಮನಕ್ಕೆ ತರುತ್ತೇನೆ. ತಾವು ಪ್ರಾಮುಖ್ಯವಾಗಿ 2—3 ಕಂಪೆನಿಗಳ ವಿಚಾರವನ್ನು ಹೇಳಿದ್ದರಿಂದ ಆ ವಿಷಯವಾಗಿ ಈ ಸಭೆಯ ಮುಂದೆ ಪ್ರಸ್ತಾಪಿಸ ಬೇಕಾಗಿದೆ. ದಾವಣಗೆರೆಯಲ್ಲಿರತಕ್ಕ ಎರಡು ಕಂಪೆನಿಗಳ ವಿಚಾರ ಹೇಳಿದರು. ಒಂದು ಕಂಪೆನಿಯವರು ತಾವು ಕೊಡಬೇಕಾದ ಅಸಲು ಮತ್ತು ಬಡ್ಡಿ ಒಂದು ನಿಗದಿಯಾದ ತಾರೀಖಿನವರೆಗೆ ಸಂಪೂರ್ಣವಾಗಿ ಪಾವತಿಮಾಡಿದ್ದಾರೆ. ಅದರ ಮುಂದೆ ಮೊದಲಿದ್ದ ಸಾಲದ ಟರ್ಮ್‌ನ ಪ್ರಕಾರ ಡಿಫಾಲ್ಟರ್ಸ್ ಆಗಿದ್ದಾರೆ. ಅನೇಕ ಕಾರಣಗಳಿಂದ ಈ ರೀತಿಯಾಗಿದೆ, ನಮಗೆ ಕೆಲವು ಉಪಯುಕ್ತವಾದ ಅವಕಾಶಗಳನ್ನು ಮಾಡಿಕೊಟ್ಟರೆ ನಮ್ಮ ಸಾಲವನ್ನು ತೀರಿಸುತ್ತೇವೆ ಎಂಬ ಒಂದು ಭರವಸೆಯನ್ನು ಕೊಟ್ಟರು. ಈಗ ಕೆಲವು ತಿಂಗಳುಗಳಿಂದ ಪಾವತಿ ಮಾಡುತ್ತಾ ಇದ್ದಾರೆ. ಷರತ್ತಿನ ಪ್ರಕಾರ ಸಾಧ್ಯವಾದಷ್ಟು ಮುಗಿದಿದೆ, ಹಣ ಎಷ್ಟು ಬರಬೇಕೋ ಅಷ್ಟು ಬರುತ್ತಾ ಇದೆ. ಸಾಲವನ್ನು ಕೊಟ್ಟಮೇರೆ ಸಂಪೂರ್ಣವಾಗಿ ವಾಪಸು ತೆಗೆದುಕೊಳ್ಳಬೇಕಾದದ್ದು ಬಹಳ ಮುಖ್ಯ. ಅದೇರೀತಿ ವಸೂಲಾಗುತ್ತಾ ಇದೆ ಎಂಬ ಅಂಶವನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಪುನಃ ರಿವೈಸ್ಡ್ ಅಗ್ರಿಮೆಂಟ್ ಆಗಿಲ್ಲ. ಯಾವರೀತಿ ಅದನ್ನು ಮಾಡಬೇಕು ಎಂಬುದನ್ನು ಸರ್ಕಾರ ನೋಡುತ್ತಾ ಇದೆ.

ಇನ್ನು ಮುಖ್ಯವಾಗಿ ನಿಮ್ಮ (ಶ್ರೀ ಶ್ರೀನಿವಾಸ ಅಯ್ಯಂಗಾರ್ಯರ) ಊರಿನಲ್ಲಿ ಇರತಕ್ಕ ಕಂಪೆನಿಯ ವಿಚಾರದಲ್ಲಿ ತಮಗೇ ಗೊತ್ತಿದ್ದ ಹಾಗೆ 1940ನೇ ಇಸವಿಯಿಂದ 10 ಲಕ್ಷ 75 ಸಾವಿರ ರೂಪಾಯಿ ಸಾಲ ಕೊಟ್ಟಿರುವುದಲ್ಲದೆ 8 ಲಕ್ಷ ರೂಪಾಯಿ ಮ್ಯೂನೂರು ಬ್ಯಾಂಕಿಗೆ ಜಮಾ ಆಗಿ ಕೊಟ್ಟಿರತಕ್ಕ ಹಣ ಇದೆ. ಈಗ ಅದನ್ನು ಏನು ಮಾಡಬೇಕು ಎಂಬುದೇ ಇವೊತ್ತಿನ ದಿವಸ ಒಂದು ದೊಡ್ಡ ಜಟಿಲವಾದ ಪ್ರಶ್ನೆ ಆಗಿದೆ. ಸರ್ಕಾರ ಏನಾದರೂ ತಾನಾಗಿ ಕೊಡತಕ್ಕ ಸಹಾಯ ನಿಲ್ಲಿಸಿದರೆ ಅದನ್ನು ಬೇಕು ಅನ್ನತಕ್ಕವರು ಅನೇಕ ಜನ, ರೈತರು ಮತ್ತು ಕೈಗಾರಿಕೆಯಪರಿಗೆ ತೊಂದರೆಯಾಗುತ್ತದೆ, ಇದನ್ನು ಯಾವರೀತಿ ಮಾಡಬೇಕು, ಇಂಡಿಯಾ ಸರ್ಕಾರದ ಮುಂದೆ ಸಮಾಲೋಚನೆ ಮಾಡಬೇಕೆ ಎಂಬ ಈ ಎಲ್ಲಾ ಅಂಕಿ ಅಂಶಗಳನ್ನೂ ಬಹಳ ಕೂಲಂಕಷವಾಗಿ ಪರಿಶೀಲನೆ ಮಾಡುತ್ತಾ ಇದ್ದೇನೆ. ಇದು ಯಾವ ರೀತಿಯಾಗಿದೆ ಎಂಬ ವಿಚಾರ ಇತ್ಯರ್ಥವಾಗಿಲ್ಲ—ಇದನ್ನು ನಾನು ಮೊನ್ನೆ ಪ್ರಸ್ತಾಪ ಮಾಡಿದ್ದೇನೆ, ಪುನಃ ಹೇಳಬೇಕಾದದ್ದು ಅನಾವಶ್ಯಕ.

ಇನ್ನೊಂದು ಅಂಶವನ್ನು ನಾನು ಮುಖ್ಯವಾಗಿ ಪ್ರಸ್ತಾಪ ಮಾಡಬೇಕಾಗಿರುವುದು ರೆಂಕೊ ವಿಚಾರ. ಅದಕ್ಕೆ ಅಂಕಿ ಅಂಶ ಕೊಟ್ಟಿದ್ದೇನೆ. 1954-55ರಲ್ಲಿ ಕೊಟ್ಟಿರುವುದನ್ನು ನೋಡಬಹುದು. 1948ನೆಯ ಇಸವಿಗೆ 22 ಲಕ್ಷ ರೂಪಾಯಿಗಳ ಬಾಕಿಯಿತ್ತು. ಆಗ ಸರ್ಕಾರದವರಿಗೆ ಇದು ನಡೆಯಬೇಕಾದರೆ ಇನ್ನೂ ಕೆಲವು ಸಹಾಯ ಮಾಡಬೇಕೆಂದು ಕಂಡುಬಂದುದರಿಂದ ಕ್ಯಾಷ್ ಕ್ರೆಡಿಟ್ ಲೋನ್ 17 ಲಕ್ಷ ರೂಪಾಯಿಗಳನ್ನು ಶೇಕಡ 4 ರಂತೆ ಬಡ್ಡಿ ಹಾಕಿ ಕೊಟ್ಟರು. ಪುನಃ ಸಹಾಯ ಮಾಡಬೇಕಾದ ಅವಶ್ಯಕತೆ ಕಂಡದ್ದರಿಂದ ಮತ್ತೆ 8 ಲಕ್ಷ ರೂಪಾಯಿಗಳ ಕ್ಯಾಷ್ ಕ್ರೆಡಿಟ್ ಲೋನ್ ಕೊಟ್ಟರು. 25 ಲಕ್ಷ ರೂಪಾಯಿಗಳಿದ್ದುದನ್ನು ಈಗ ಕಡಮೆ ಮಾಡಬೇಕು ಎಂದು ಹಣಕಾಸಿನ ಮಂತ್ರಿಗಳು 18 ಲಕ್ಷ ರೂಪಾಯಿಗಳಿಗೆ ಇಳಿಸುವಂತೆ ಅರ್ಡರು ಮಾಡಿದ ಹಾಗೆ ನೆನಪಿಗೆ. ರೆಂಕೊ ಒಂದು ಕಂಪೆನಿ ಹಾಗಲ್ಲ. ಈ ದಿವಸ ನಮಗೆ ಬರಬೇಕಾಗಿರುವುದು 19,76,000 ರೂಪಾಯಿಗಳು. ಇದರಲ್ಲಿರುವ ಕಷ್ಟ ಏನೆಂದರೆ, ಕ್ಯಾಷ್ ಕ್ರೆಡಿಟ್ ಲೋನ್ ಬರಬೇಕಾದರೆ ರೇಡಿಯೋ ಸೆಟ್ಟ್ ನಾವೆಷ್ಟು ಸಮರ್ಪಕವಾಗಿ ಕೆಲಸ ಮಾಡಬೇಕೆಂದು ಅಪೇಕ್ಷೆ ಪಟ್ಟೆವೋ ಅಷ್ಟು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಆಗಿಲ್ಲ. ಇದಕ್ಕೆ world events ಕಾರಣ. ಇದು ಸರಿಹೋಗುವುದಕ್ಕೆ energy meters ಮತ್ತು ಪ್ಲಾಸ್ಟಿಕ್ ಸೆಟ್ಟ್ ಆವಶ್ಯಕ. ಅದನ್ನು ತರಿಸಿ ಹಾಕುವ ನಿರೀಕ್ಷೆಯಿದೆ. ಇದಲ್ಲದೆ ನಾನೇ ಅಲ್ಲಿ ಕುಳಿತು ಅಂಕಿ ಅಂಶಗಳನ್ನು ನಾಲ್ಕು ಗಂಟೆಗಳ ಕಾಲ ನೋಡಿದ್ದೇನೆ. ಅಲ್ಲಿರುವ ಲೇಬರ್ ಸಮರ್ಪಕವಾಗಿದೆ. ಅದು ಯಾವ ರೀತಿ ಸರಿಹೋಗ ಬೇಕೆಂಬ ವಿಚಾರವನ್ನು ಸರ್ಕಾರ ತೀವ್ರವಾಗಿ ಆಲೋಚಿಸಬೇಕಾಗಿದೆ.

ಕೊನೆಯದಾಗಿ ಹರಿಜನರ ಸಾಲದ ವಿಚಾರದಲ್ಲಿ ಇಬ್ಬರು ಮಹನೀಯರು ಬಹಳ ಕಳಕಳಿಯಿಂದ ಈ ಸಭೆಯ ಮುಂದೆ ಅನೇಕ ಅಂಶಗಳನ್ನು ಹೇಳಿದರು, ಅದರಲ್ಲಿ ಕೆಲವು ಸೂಕ್ತವಾಗಿವೆ. ಹಿಂದೆ ಕೈಗಾರಿಕೆಗಳಿಗೆ ಸಾಲ ಕೊಡುವ ವಿಚಾರದಲ್ಲಿ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆಯೆಂದು ಕೇಳಿದರು. ಹರಿಜನರ ವಿಚಾರದಲ್ಲಿ ಅವರ ಆರ್ಥಿಕಸ್ಥಿತಿ ಸರಿಹೋಗ ಬೇಕೆಂಬ ವಿಷಯದಲ್ಲಿ ಸರ್ಕಾರದ ಭಿನ್ನಾಭಿಪ್ರಾಯ ವಿಲ್ಲವೆಂಬುದನ್ನು ಒತ್ತಿ ಹೇಳಬೇಕಾದ ಆವಶ್ಯಕತೆಯಿಲ್ಲ. ಈಚೆಗೆ ನಡೆದಿರುವ ಒಂದು ಉದಾಹರಣೆ ಹೇಳಬೇಕೆಂದರೆ ಸರ್ಕಾರ ತಮಗೆ ಗೊತ್ತಿರುವ ಹಾಗೆ ತಂಗಡಿ ಚಕ್ಕೆ ಕೈಗಾರಿಕೆ, ಚರ್ಮ ಹದ ಮಾಡುವುದು ಮುಂತಾದುವುಗಳಲ್ಲಿ ಹೆಚ್ಚಾಗಿ ಹರಿಜನರು ಕಷ್ಟಪಟ್ಟು ಕೆಲಸ ಮಾಡುತ್ತಾರೆ, ಅವರಿಗೆ ಸರಿಯಾದ ಪ್ರತಿಫಲ ಸಿಕ್ಕಬೇಕು ಎಂದು ವಿಚಾರ ಮಾಡಿ ಅದಕ್ಕೆ ಸಹಕಾರ ಸಂಘ ಮಾಡಿ ಬೇಕಾದ ಸಹಾಯ ನೀಡಲು ಅವಕಾಶ ಮಾಡಿದರು. ಇದರಿಂದ ಅವರಿಗೆ ಪ್ರಯೋಜನ ದೊರಕಿದೆ. ಇಷ್ಟೇ ಅಲ್ಲ, ಚಪ್ಪಲಿ ತಯಾರಿಸಲು ಸಹಕಾರ ಸಂಘವಿದೆ. ಪೋಲೀಸು ಇಲಾಖೆಯಲ್ಲೂ ಅವರಿಗೆ ಸಾಧ್ಯವಾದ ಸಹಾಯ ಮಾಡಬೇಕೆಂಬ ಉದ್ದೇಶ

(ಶ್ರೀ ಎಚ್. ಸಿದ್ದವೀರಪ್ಪ.)

ವನ್ನಿಟ್ಟು ನುಮಾರು 80 ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಇಷ್ಟೇ ಅಲ್ಲದೆ ಎಲ್ಲಾ ಸಹಕಾರ ಸಂಘಗಳೂ ಮುಂದೆ ಬಂದು ಅವರಿಗೆ ಉತ್ತೇಜನ ಕೊಡುವ ಹಾಗೆ ಪ್ರಯತ್ನ ಮಾಡಬೇಕೆಂಬುದು ಸರ್ಕಾರದ ದೃಷ್ಟಿಯಲ್ಲಿದೆ. ಈ ರೀತಿ ಸರ್ಕಾರಕ್ಕೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅವರನ್ನು ಮುಂದುವರಿಸಬೇಕೆಂಬುದೇ ಸರ್ಕಾರದ ಆಸೆಯಾಗಿದೆ ಎಂಬುದನ್ನು ಈ ಮೂಲಕ ನ್ಪಷ್ಟವಾಗಿ ವ್ಯಕ್ತಪಡಿಸುತ್ತೇನೆ. ಇನ್ನು ನನ್ನ ಮಾನ್ಯ ಮಿತ್ರರಿಗೆ ಅವಕಾಶಕೊಡುತ್ತೇನೆ.

ಡಾ॥ ಆರ್. ನಾಗನಗೌಡ (ವ್ಯವಸಾಯದ ಇಲಾಖೆಯ ಮಂತ್ರಿಗಳು).—ಸ್ವಾಮಿ, ಶ್ರೀಮತಿ ನುಬ್ಬಮ್ಮನವರು ಏಲಕ್ಕಿ ವಿಷಯ ಹೇಳಿದರು. ಏಲಕ್ಕಿ ಹೈರಿಗೆ ಒಂದು ವಿಧವಾದ ರೋಗ ಬಂದಿದೆ, ಬಹಳ ನಷ್ಟವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಇತ್ತೀಚೆಗೆ ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಸೊಸೈಟಿಯವರು ಏಲಕ್ಕಿ ಬೆಳೆಯ ರೋಗವನ್ನು ಪರಿಶೀಲಿಸುವುದಕ್ಕೆ ಒಂದು ಸಂಶೋಧನೆ ಏರ್ಪಾಡು ಮಾಡಿದ್ದಾರೆ. ಈ ವರ್ಷ ಈ ವಿಷಯವನ್ನು ಗಮನಿಸಿ ಈ ರೋಗದ ನಿವಾರಣೆ ಮಾಡಲು ಎಲ್ಲಾ ವಿಧವಾದ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಈಗ ಸಕಲೇಶಪುರದಲ್ಲಿ ಒಂದು ಸಹಕಾರ ಸಂಘವಿದೆ ಮತ್ತು ಏಲಕ್ಕಿ ವಿಷಯದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಮಾಡಬೇಕೆಂದಿದೆ. ಮೂಡಗೆರೆಯ ಸೊಸೈಟಿಯನ್ನು ಸರಿಯಾಗಿ ಜರುಗಿಸಿಲ್ಲ. ಅಲ್ಲಿನ ಮಾನ್ಯ ಮಹನೀಯರು ಹಳೇ ಸಾಲವೆಲ್ಲಾ ಬರಮಾಡಲು ಪ್ರಯತ್ನ ಮಾಡಿ ಪುನರುಜ್ಜೀವನ ಮಾಡಿ ಈ ಸಂಘದಿಂದ ಜನರಿಗೆ ಅನುಕೂಲ ಪಡಿಸಬೇಕು, ಹಾಗೆ ಮಾಡಿದರೆ ಸಹಾಯವಾಗುತ್ತದೆ.

ಶ್ರೀ ದೇವರಾಜ ಅರಸ್ ಅವರು ಅಗ್ರಿಕಲ್ಚರಲ್ ಕಾರ್ಪೊರೇಷನ್ ಏರ್ಪಾಡು ಮಾಡಬೇಕೆಂದು ಸೂಚನೆ ಕೊಟ್ಟರು. ಅಗ್ರಿಕಲ್ಚರಲ್ ಕಾರ್ಪೊರೇಷನ್ ಆಗಲಿ, ರಿಸರ್ವ್ ಬ್ಯಾಂಕ್ ಆಗಲಿ, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಆಗಲಿ, ಯಾವುದೇ ಆಗಲಿ ರೈತರಿಗೆ ಹಣ ಒದಗಿಸಬೇಕೆಂಬುದೇ ಎಲ್ಲರೂ ಹೇಳುವ ಮುಖ್ಯವಾದ ಅಂಶವಾಗಿದೆ. ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್ ಪ್ರಾರಂಭಮಾಡುವುದಕ್ಕೆ ಸರ್ಕಾರಕ್ಕೆ ಅನುಕೂಲವಿಲ್ಲವೆಂದು ಸೆಂಟ್ರಲ್ ಬ್ಯಾಂಕಿನವರು ಹೇಳಿದ್ದಾರೆ. ರಿಸರ್ವ್ ಬ್ಯಾಂಕಿನವರು ನಮ್ಮ ಮೈಸೂರು ಸಂಸ್ಥಾನಕ್ಕೆ, ಇಲ್ಲಿರುವ ರೈತರಿಗೆ ಹಣ ಸಹಾಯ ಮಾಡಲು ಮುಂದೆ ಬಂದಿದ್ದಾರೆ; ಬೇಕಾದರೆ 2½ ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಈ ವರ್ಷ ಮೂರುಜಿಲ್ಲೆಗಳಲ್ಲಿ ಸೆಂಟ್ರಲ್ ಬ್ಯಾಂಕ್ ಏರ್ಪಾಡು ಮಾಡಿ, change the system of public loans ಎಂದು ಹೇಳಿದರು. ಆದರೆ ಸಿಸ್ಟಂ ಛೇಂಜ್ ಮಾಡಿದರೂ ಅಥವಾ ಏನು ಮಾಡಿದರೂ ಆಗುವುದಿಲ್ಲ. ಅಲ್ಲಲ್ಲಿ ಪಟೇಲ ಶ್ಯಾನುಭೋಗರು, ರೆವೆನ್ಯೂ ಇನ್‌ಸ್ಪೆಕ್ಟರು ಮುಂತಾದವರಿರುತ್ತಾರೆ. ಅವರನ್ನು ಬಿಟ್ಟರೆ ಹೇಗೆ ಎಂದು ಶ್ರೀ ಸಿದ್ದಯ್ಯನವರು ಹೇಳಿದ್ದು ಕೇಳಿ ಮನಸ್ಸಿಗೆ ಚುರ್‌ಅನ್ನಿಸಿತು. ನಮ್ಮ ಕಾಲ ಮೇಲೆ ನಿಂತರೆ ಸಹಾಯವಾಗುತ್ತದೆಯೇ ವಿನಾ ಇನ್ನೊಬ್ಬರ ಮೇಲೆ ಆಧಾರಪಟ್ಟರೆ ಏನೂ ಆಗುವುದಿಲ್ಲ. ಎಂದಿನವರೆಗೆ ಇನ್ನೊಬ್ಬರ ಮೇಲೆ ಆಧಾರವಾಗಿರುತ್ತೇವೆಯೋ ಅಲ್ಲಿನವರೆಗೆ ಕಷ್ಟವಾಗುತ್ತದೆ. ಈಗ ರಿಸರ್ವ್ ಬ್ಯಾಂಕಿನವರು 2½ ಕೋಟಿ ರೂಪಾಯಿಗಳನ್ನು ಕೊಡಲು ಸಿದ್ಧರಿದ್ದಾರೆ. ಈ ವರ್ಷ 25 ಲಕ್ಷ ರೂಪಾಯಿಗಳನ್ನು ಉಪಯೋಗಿಸಬೇಕೆಂದಿದ್ದೇವೆ. ತಮ್ಮ ಗ್ರಾಮದಲ್ಲಿರುವ ಸೊಸೈಟಿಯಲ್ಲಿ ಹರಿಜನರೇ ಮತ್ತು ಇತರರು ಮೆಂಬರುಗಳಾಗಿ, ಆಫೀಸ್ ಬೇರರ್ಸ್ ಆಗಿ, ಪಂಚಾಯಿತಿದಾರರು ಮುಂತಾದವರಾಗಿ ಅದನ್ನು ತಮ್ಮ ಕೈಲಿ ತೆಗೆದುಕೊಂಡು ನಡೆಸಿಕೊಂಡು ಹೋಗುವುದು ಅವಶ್ಯಕ. ಈಗ ಹಣವಿದೆ, ಅವಶ್ಯಕತೆಯಿದೆ, ಇನ್ನೊಬ್ಬರ ಕೈಗೆ ಕೊಟ್ಟರೆ ಹಣ ಬರುವುದಿಲ್ಲ. 100 ರೂಪಾಯಿಗಳನ್ನು ಕೊಟ್ಟರೆ ಅದು ಕೈಗೆ ಬರುವಾಗ್ಗೆ 25 ರೂಪಾಯಿಗಳು ಖರ್ಚಾಗುತ್ತವೆಂದರೆ ಹೇಗೆ? ಈ ಸಂಘಗಳನ್ನು ಹೆಚ್ಚಿನ ಸಹಾಯ ಅವುಗಳಿಂದ ದೊರೆಯುವಂತೆ ಮಾಡಿಕೊಳ್ಳಬೇಕು.

ಈಗ ಪ್ರತ್ಯೇಕವಾಗಿ ಹರಿಜನರಿಗೆ, ಹಿಂದುಳಿದವರಿಗೆ ಒಂದು ಏರ್ಪಾಡು ಮಾಡಿ ಎಂದು ಹೇಳಿದರು. ಮದ್ದಾನಿನಲ್ಲಿ ಒಂದು ಕ್ರಿಶ್ಚಿಯನ್ ಸೆಂಟ್ರಲ್ ಬ್ಯಾಂಕನ್ನು ಸ್ಥಾಪನೆ ಮಾಡಿದರು. ಆದರೆ ಅದರಿಂದ ಹೆಚ್ಚಿನ ಸಹಾಯವಾಗಲಿಲ್ಲ. ಆದ್ದರಿಂದ ಆದರಿಂದ ಪ್ರಯೋಜನವಾಗಲಾರದು. ಅಲ್ಲಿ 10—12 ವರ್ಷ ಪ್ರಯತ್ನಮಾಡಿ ಅದನ್ನು ಮುಚ್ಚಬೇಕಾಯಿತು. ನಮ್ಮ ಪ್ರದೇಶದಲ್ಲಿ ಈಗ ನುಮಾರು 70 ಲಕ್ಷ ಹರಿಜನರಿರುವಾಗ ಅವರಿಗೆ ಬೇಕಾದಷ್ಟು ಹಣ ಬೇಕು. ಅವರಿಗೆ ಸರಿಯಾದ ಆದಾಯವಿಲ್ಲ. ಅದಕ್ಕೆ ರಿಸರ್ವ್ ಬ್ಯಾಂಕು ಕೊಡುವ ಸಹಾಯವನ್ನು ಉಪಯೋಗಿಸಿಕೊಳ್ಳಲು ಏರ್ಪಾಡು ಮಾಡಿದೆ. ಆದರೆ ಸಂಘಗಳಲ್ಲಿ ಮೆಂಬರುಗಳಾಗ ಬೇಕು. ನಮ್ಮ ಊರುಗಳಲ್ಲಿ ಕೆಲವು ಸಂಘಗಳಿವೆ. ಅಲ್ಲಿ ಹರಿಜನರನ್ನು ಡೈರೆಕ್ಟರನ್ನಾಗಿ ಮಾಡಿದ್ದೇವೆ. ಅವರು ಬಡವರಾದರೂ ಪರವಾಗಿಲ್ಲ, ಆಸ್ತಿ ಸಹ ಅವರಿಗೆ ಇರಬೇಕಾದ ಅವಶ್ಯಕತೆಯಿಲ್ಲ. ವಿಶೇಷವಾಗಿ ರೈತರೇ ಹೆಚ್ಚಾಗಿ ಸಂಘಗಳಲ್ಲಿದ್ದಾರೆ. ಅವರಿಗೆ ಸಾಲ ಕೊಟ್ಟಿದ್ದೇವೆ. ಈ ದಿವಸ ತಾವು ಕೇಳಿರುವಂತೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು ಮೂಲಕ ಹಣ ಮಂಜೂರು ಮಾಡಬೇಕೆಂಬುದನ್ನು ಒಪ್ಪುತ್ತೇನೆ.

Mr. SPEAKER.—The question is:

"That a sum not exceeding Rs. 2,02,77,000 be granted to the Government to defray the charges which will come in course of payment during the year ending 31st day of March 1955, in respect of 'Loans and Advances by the State Government'."

The motion was adopted.

DEMANDS FOR SUPPLEMENTARY GRANTS FOR 1953-54.

5 P.M.

Mr. SPEAKER.—What time shall we fix for debate on the Supplementary Grants?

Sri S. GOPALA GOWDA (Sagar—Hosanagar).—No time limit. Very many subjects there are to be dealt with.

ನನ್ನ ಅಭಿಪ್ರಾಯದಲ್ಲಿ ಈಗ ನಾನೇನೂ ಈ ಕೆಲಸವನ್ನು ಅವಸರವಸರವಾಗಿ ಮುಗಿಸಿಬಿಡಬೇಕೆಂಬ ನಿರ್ಧಾರಕ್ಕೆ ಬಂದಿಲ್ಲ. ಅನೇಕ ಮನವಿಗಳ ಬಗ್ಗೆ ಈ ಸಭೆ ತನ್ನ ಅಭಿಪ್ರಾಯವನ್ನು ವಿಶದವಾಗಿ ವ್ಯಕ್ತ ಪಡಿಸಲು ಕಾಲಾವಕಾಶವಿಲ್ಲದೆ ಸಾಧ್ಯವಾಗದೇ ಇರುವುದು ವಿಷಾದಕರವಾದ ವಿಷಯ.

Mr. SPEAKER.—I must state you have not understood me or the House. (*After a pause*) No doubt cut motions have been tabled. But one or two cut motions used to be discussed and the whole main demand used to be put to vote. Even then there used to be not so much scope to express their views on particular demands. I therefore decided—I have made myself clear—and the House has come to some agreement. There has been a clear understanding. Now, at the close of all these demands and that too when all the demands are passed, you pass such remarks. Is it desirable Sri Gopala Gowda? You are no doubt at liberty to pass any remark but it must be reasonable.

Sri S. GOPALA GOWDA.—I am sorry, Sir. ಈ ಗ್ರಾಂಟುಗಳ ವಿಚಾರದಲ್ಲಿ ಸಭೆಯಲ್ಲಿ ನಮ್ಮ ಅಭಿಪ್ರಾಯವನ್ನು ವಿಶದವಾಗಿ ವ್ಯಕ್ತ ಪಡಿಸಲು ಕಾಲಾವಕಾಶ ಹೆಚ್ಚಾಗಿ ಬೇಕೆಂಬ ಅಂಶವನ್ನು ನಾನು ಸೂಚಿಸಿದೆ; ಅಷ್ಟೆ.

Mr. SPEAKER.—That is over. Grants are over. I am now asking whether it is desirable to fix a time limit about supplementary demands—till six of the clock or 6-30. A reasonable time is necessary. Is the House agreeable to sit till 6-30?

Several MEMBERS.—Yes.

Sri J. MOHAMED IMAM (Jagalur).—I think the Hon'ble the Chief Minister may move the demands to save time and I suggest that we may be permitted to cover up all the demands.

Mr. SPEAKER.—Yes, quite so.

Sri J. MOHAMED IMAM.—We have hardly two hours before us. But we will try to finish it earlier.

Mr. SPEAKER.—At what time?

Sri K. HANUMANTHAIYA (Leader of the House).—You may have one hour.

Sri J. MOHAMED IMAM.—I think we can have the debate till 6-30.

Mr. SPEAKER.—I am now speaking to the Hon'ble Leader of the Opposition. What time can we have?

Sri J. MOHAMED IMAM.—We can have till 6-30.

Mr. SPEAKER.—What does the Leader of the House say?

Sri K. HANUMANTHAIYA.—Time cannot be made elastic.

Mr. SPEAKER.—But when once we fix the time limit I will apply guillotine.

Sri K. HANUMANTHAIYA.—He said till 6-30. I agree.

Mr. SPEAKER.—Yes. Then I move all the demands. Motion moved:

> "That the respective sums not exceeding the amounts shown in the list of Additional and Supplementary Demands for Grants for the year 1953-54 circulated among the Members be granted to the Government to defray the charges which will come in course of payment during the year ending 31st March 1954 in respect of Demands Nos. 9, 18, 23, 26, 29, 34, 40, 41 and 42."

Now the debate.

Sri J. MOHAMED IMAM (Jagalur).—I rise to oppose all these supplementary demands.

*Sri K. HANUMANTHAIYA (Chief Minister).—I can understand if you oppose one or two demands, but not all.

*Sri J. MOHAMED IMAM.—Sir, this Ministry has a knack to take us by surprise. The latest surprise they have given us is to introduce this third instalment of supplementary demands. Previously we had to deal with two lists of supplementary demands. The first one asked the House to vote a supplementary demand of nearly one crore of rupees. The second supplementary demand sought the permission of the House for an expenditure over and above the sanctioned estimate of nearly a crore and a half. Now, we are asked to vote this supplementary demand, just on the day we have finished discussion of the Budget Demands for the year 1954-55. In the first place, I must state that the procedure adopted by the Finance Minister in introducing and asking us to agree to this supplementary demand is highly irregular if not illegal. Because, all supplementary demands must be passed ordinarily before the introduction of the Budget, because all these items which have been spent

(Sri J. MOHAMED IMAM.)

must find a place and must be included in the Budget for the ensuing year. But now there is no indication of the spending of these various amounts and so these have not been taken into consideration in the regular Budget for the next year and we are now asked to vote items when the time has passed. Sir, apparently it looks to be an innocent demand. They have asked us only for a sum of Rs. 1,700, as token demand. But really speaking, they have been asking for an extra sum of nearly Rs. 35 to 40 lakhs. Under demand No. 9 they ask us—I believe they have already spent—Rs. 25,000; under Demand No. 18 they have spent Rs. 15,000; under Demand No. 23 they have spent Rs. 3,13,000; under Demand No. 26 Industries and Supplies they need Rs. 3,84,000; under Demand No. 29—they have not given us the actual figures; they want money to build overhead reservoir to the combined Hospital, Bangalore, and construct an additional block to New Mental Hospital, Bangalore, and cement concrete about 13 miles of road, which comes to nearly Rs. 15 lakhs and more; under Demand No. 40 there is no indication of the amount they want but they require about Rs. 2,16,000 to meet the pay of the Chief Engineer who has been recently appointed and also the expenditure of 4 Public Works Divisions and 13 Sub-Divisions and under Demand No. 42 they want Rs. 1,18,000 under Electricity Schemes. In all they want nearly virtually Rs. 36 lakhs in the guise of a token demand of only Rs. 1,700 (*A Voice*: Is this extra amount?) Extra amount which has heen already spent by this time, because 31-3-1954 is only 2 days more. So all this amount must have been spent by this time and so they ought to have been included in the revised estimate. That has not been done and that is why I say it is highly irregular. If these amounts are included and taken into consideration, the whole Budget will have to be changed. If we include Rs. 35 lakhs in the revised estimate only, it will have its repercussion on the Budget for 1954-55. The opening balance will have to be reduced by 20 lakhs and consequently the deficit would increase from 309 lakhs to 340 lakhs.

Sir, that is why I call this irregular and I do not know why the Finance Minister did not include this in the regular items of the revised estimate. These items were accepted long ago, Sir. In fact many of the items have been sanctioned in the months of December and February. I can give you an instance. The Chief Engineer's place for instance. Under the Demand 40, a Special Chief Engineer has been appointed for looking after the works connected with the Bhadra Reservoir and starting of public works sub-divisions. These were sanctioned by the Government long ago and the Chief Engineer for Irrigation was appointed long ago. Why was not this item of expenditure included under the revised estimates? I think the Government have not explained. These items of expenditure are not of recent occurrence, but still they have not included in the Budget.

Similarly, Sir, I can give other instances. For example, contribution to Depressed Class Amelioration Fund and development schemes for the welfare of criminals. All these were passed in the month of February 1954. Government orders were passed long ago sanctioning these amounts, but they were not included in the Budget. The net effect of that is this and now we are asked to vote an extra amount of Rs. 35,00,000 which will affect the financial position very much and it will enhance the deficit from 309 lakhs to nearly 340 lakhs. This will wipe off the closing balance of 42 lakhs. At the end of 1954-55, the closing balance is 42 lakhs and if this amount is to be met out of the closing balance, the closing balance will be wiped out and this will leave the finances of the State in a very unstable position. The fact that they did not include these figures in the revised figures leads us to one conclusion and that is that they did not want to show the House the actual financial position.

Again, Sir, I must submit that these amounts are going to be met from the savings. It is all right; these amounts can be re-appropriated if there are

enough savings out of the sanctioned items. But in many cases we find that there are no savings at all. For example, I go to '40. Rural Development'. A sum of Rs. 3,13,000 had to be re-appropriated. The sanctioned figure for the year 1953-54 was 31,52,000. The revised estimate is 34,24,000. So they have spent nearly 3 lakhs more than the sanctioned figure. So I would like to know where are the savings and from which source you are going to re-appropriate. If the full budget allotment has not been fully utilised, and if there are savings, then you can divert the savings towards some other items. But here you find there are hardly any savings; on the other hand, you have spent much more than the grant provided. And that is only one instance.

